# HAVYAKA SANDESHA
# ಹವ್ಯಕ ಸಂದೇಶ

॥धर्मो रक्षति रक्षितः॥

A Monthly Newsletter of Havyaka Welfare Trust, Estd. 1964

Vol. 32 No. 11 SEPTEMBER 2023 Pages 16 Rs. 2/-



PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.

**"Havyaka Sandesha"** is a monthly publication by **HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆ 2665 2591

| | | |
|---|---|---|
| *Hon. Editor* | : | Smt. Amita S. Bhagwat |
| *Editorial Committee* | | Smt. Shashikala Hegde<br>Smt. Tanuja Hegde<br>Shri Umesh Hegde<br>Shri Ganesh Bhat<br>Smt. Shailaja Hegde |
| *Publisher* | : | Narayan Akadas R.<br>Hon. Gen. Secretary |
| *Printed at* | : | M/s. Navin Printers<br>Mumbai - 400 016.<br>✆ 2430 8316 |

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2022-2023**

| | | |
|---|---|---|
| *President* | : | Shivkumar P. Bhagwat |
| *Vice - President* | : | Sanjay Bhat |
| *Hon. Gen. Secretary* | : | Narayan Akadas |
| *Hon. Jt. Secretary* | : | Vasant Bhat |
| *Hon. Treasurer* | : | Gautam Upadhya |

***Elected Members :***

| | |
|---|---|
| Smt. Tanuja Hegde | G. S. Bhat |
| Smt. Shashikala Hegde | Vishnu Bhagwat |
| Ramana Bhat | Ramesh Vaidya |
| Umesh Hegde | Chidanand Bhagwat |
| Anant Bhat | |

***Co-opted Members :***
Chandrashekhar Joshi, G. V. Hegde



# Boosting Self Confidence



*Moon, often referred as the symbol of beauty is always fascinating. Sunlight may be harsh but moonlight always consoles. On a full moon day wave in the sea rise to admire him. He sails through poetry. The crescent moon smiles in the hair of Aadiyogi . While he creates paradise for lovers, he also lures small kids. Whenever an artist paints Raasaleela of Radhakrishna, the full Moon smiles in the backdrop. The Bala Kaanda of Ramayana depicts a story where Shri Rama as a baby demands all around him to fetch the Moon. No one can console him. However, when Kaikeyi gives him mirror and catches the image of the moon, Shri Rama believes that Moon is in his hand.*

*Today, the Indian Flag is on the Moon and we feel that the Moon is still closer to us. Moreover, Vikram has landed in a place on the moon where no other country could make it. News channels in different countries were live telecasting Indian Mission to the Moon and now they are looking up to us.*

*We always had the ability but did not have resources. Even today, Isro has achieved its mission with a budget of a Bollywood movie. The history of our country is illustrated with wisdom of sages who could predict eclipses when the rest of the world even did not know that earth was round. We discovered the number zero. Moreover, India was such a rich country that the rest of the countries were attracted to it. It was described as a paradise where there were no beggars. India was called a Golden Bird.*

*With the history of colonization, we went into the list of underdeveloped country with poverty being the striking feature. With education and hard work, a country can overcome it. However even after 77 years of independence, our colonial mindset has not changed. Though we are surrounded by greenery, we find the green pasture of the western country more attractive.*

*We have the brain. We have both human and natural resources. We have opportunities. We have a big market. All that we need is to have faith in ourselves that we can take our country to the next level.*

*At least now, we should realize our potentials; our ability to visualize, plan and execute. Though we should not bask upon our great heritage, we should take inspiration from it. We need not look at other countries for inspiration. We have the ability to lead.*

*The success of Chandrayana 3 has opened a new chapter by boosting our confidence.*

Amita S Bhagwat

e-mail : amitabhagwat@gmail.com

# ಮಾಸ ಮಹಾತ್ಮ್ಯ

✍ ಗಣಪತಿ ಭಟ್ಟ

*(ಕಳೆದ ಸಂಚಿಕೆಯಿಂದ)*

ಒಂದು ದಿನ ಪರಶುರಾಮನು ಈಶ್ವರನ ದರ್ಶನಕ್ಕೆ ಬಂದು ಒಳಗೆ ಹೋಗಲೆತ್ನಿಸಲು ಬಾಗಿಲಲ್ಲಿ ನಿಂತ ಗಣೇಶನು ಅವನನ್ನು ತಡೆದನು. ಇದರಿಂದ ಅವರೊಳಗೆ ಯುದ್ಧವಾಗಿ ಗಣೇಶನೇ ಜಯಶಾಲಿಯಾದರೂ ಪರಶುರಾಮನ ಪರಶುವಿನ ಹೊಡೆತದಿಂದ ಗಜವಕ್ತ್ರನ ಒಂದು ಧಾಡೆಯು ಮುರಿಯಿತು. ಅದರಿಂದ ಏಕದಂತನೆನಿಸಿಕೊಂಡನು.

ಪಾರ್ವತಿ ಪರಮೇಶ್ವರರ ಮಕ್ಕಳಾದ ಷಣ್ಮುಖ, ಗಣೇಶರಿಬ್ಬರೂ ವಿವಾಹ ವಯಸ್ಕರಾಗಲು ಯಾರು ಮೊದಲು ಭೂಪ್ರದಕ್ಷಿಣೆ ಮಾಡಿ ಬರುವರೋ ಅವರಿಗೆ ಮೊದಲು ವಿವಾಹ ಮಾಡುವೆನೆಂದು ಈಶ್ವರನು ಹೇಳಿದನು. ಷಣ್ಮುಖನು ಮಯೂರವನ್ನೇರಿ ಭೂಪ್ರದಕ್ಷಿಣೆಗಾಗಿ ಹೊರಟನು. ಆದರೆ ಗಜಾನನನು ತಾಯಿ-ತಂದೆಗಳಿಬ್ಬರೂ ಒಟ್ಟಾಗಿ ಕೂತಿರುವದನ್ನು ನೋಡಿ ಅವರಿಗೆ ಮೂರು ಪ್ರದಕ್ಷಿಣೆ ಮಾಡಿ ಬಂದು ಕೈಮುಗಿದು ನಿಂತನು. ಈಶ್ವರನು ಇವನ ಜಾಣತನಕ್ಕೆ ಮೆಚ್ಚಿ ಗಜಾನನನೇ ಮೊದಲು ಭೂಪ್ರದಕ್ಷಿಣ ಮುಗಿಸಿದಂತಾಯಿತೆಂದು ಒಪ್ಪಿ ಅವನಿಗೆ ಸಿದ್ಧಿ, ಬುದ್ಧಿಗಳ ವಿವಾಹ ಮಾಡಿದನು. ಇದರಿಂದ ಷಣ್ಮುಖನು ಸಿಟ್ಟಾಗಿ ಚಿರಬ್ರಹ್ಮಚಾರಿ (ಕುಮಾರನು) ಆಗಿಯೇ ಉಳಿದನು. (ವಿಷ್ಣುವೇ ಗಣೇಶ ರೂಪದಿಂದ ಪಾರ್ವತಿಯಲ್ಲಿ ಅವತರಿಸಿದನೆಂದೂ ಹೇಳಿದೆ.) ಒಂದು ದಿನ ಒಬ್ಬ ಸ್ತ್ರೀಯು ಗಣೇಶನನ್ನು ನೋಡಿ ಮೋಹಿಸಿ ತನ್ನನ್ನು ಮದುವೆ ಆಗೆಂದಳು. ಅವಳಿಗೆ ಗಣೇಶನು ಎಷ್ಟು ಬುದ್ಧಿ ಹೇಳಿದರೂ ಕೇಳದೆ ಅವಳು ಗಣೇಶನಿಗೆ ಸಂಸಾರಿಯಾಗೆಂದು ಶಾಪವಿತ್ತಳು; ಗಣೇಶನೂ ಅವಳಿಗೆ ಶಾಪವಿತ್ತನು; ಈ ಸ್ತ್ರೀಯೇ ಮುಂದೆ ತುಲಸಿಯಾಗಿ ಹುಟ್ಟಿ ಗಣಪತಿಯ ಪೂಜೆಗೆ ಅನರ್ಹಳಾದಳು. (ಗಣೇಶ ಚತುರ್ಥಿಯ ದಿನ ಮಾತ್ರ ಪಾದದ ಮೇಲಿಡಬಹುದು.)

ಶ್ರೀಗಣೇಶನು ವಿಘ್ನಪರಿಹಾರಕನೂ, ಲೇಖನಪಟುವೂ ಇರುವದರಿಂದ ಗ್ರಂಥಾರಂಭದಲ್ಲಿ 'ಶ್ರೀಗಣೇಶಾಯನಮಃ' ಎಂದು ಬರೆಯುವ ಪರಿಪಾಟ ಬಿದ್ದಿದೆ. ವೇದವ್ಯಾಸರು ಮಹಾಭಾರತವನ್ನು ರಚಿಸಿ ಬ್ರಹ್ಮನ ಸೂಚನೆಯಂತೆ ಗಣೇಶನನ್ನು ಲೇಖಕನನ್ನಾಗಿ ಮಾಡಿಕೊಂಡರು. ಅವರು ಶ್ಲೋಕವನ್ನು ರಚಿಸಿ ಹೇಳಿ ಮುಗಿಸುವದರೊಳಗೆ ಗಣೇಶನ ಬರಹವು ಮುಗಿದು ಹೋಗುತ್ತಿತ್ತು. ಇದಕ್ಕಾಗಿ ವ್ಯಾಸರು ಅಲ್ಲಲ್ಲಿ ಕಠಿಣಪದ ಪ್ರಯೋಗಮಾಡಿ ಗಣೇಶನಿಗೆ ಅರ್ಥವಾಗದೆ ಬರಹವು ತಡೆಯುವಂತೆ ಮಾಡುತ್ತಿದ್ದರೆಂದೂ ಒಂದು ಕಥೆಯಿದೆ.

**ಋಷಿ ಪಂಚಮಿ –** ಭಾದ್ರಪದ ಶು. 5 ದಿನ ಈ ವ್ರತವನ್ನು ಸ್ತ್ರೀಯರು ಆಚರಿಸುವರು. ಈ ದಿನ ಸಪ್ತರ್ಷಿಗಳ ಪೂಜನವೇ ಮುಖ್ಯವಾದದ್ದರಿಂದ ಇದಕ್ಕೆ ಋಷಿಪಂಚಮಿ ಎಂಬ ಹೆಸರು ಬಂದಿರುತ್ತದೆ. ಮಧ್ಯಾಹ್ನ ವ್ಯಾಪಿನಿಯಾದ ಪಂಚಮಿಯು ಮುಖ್ಯವಾದದ್ದು. ಎರಡೂ ದಿನ ಮಧ್ಯಾಹ್ನ ವ್ಯಾಪ್ತಿಯಿದ್ದರೆ ಪೂರ್ವದಿನವೇ ಗ್ರಾಹ್ಯವಾದದ್ದು. ಸ್ತ್ರೀಯರು ರಜಸ್ವಲೆಯರಾದಾಗ ನಾಲ್ಕು ದಿನ ಅಶುಚಿಗಳೆಂದೂ ಅಸ್ಪೃಶ್ಯರೆಂದೂ, ತಿಳಿಯಲ್ಪಡುತ್ತಾರೆ. (प्रथमेऽहनि चांडाली द्वितीये ब्रह्मघातकी। तृतीये रजकीप्रोक्ता चतुर्थेऽहनि शुध्यति।।) ಈ ಕಾಲದಲ್ಲಿ ಮನೆಯ ಪಾತ್ರೆ ಮೊದಲಾದವುಗಳ ಸ್ಪರ್ಶದಿಂದುಂಟಾದ ದೋಷನಿವೃತ್ತಿಗಾಗಿ ಈ ವ್ರತವನ್ನು ಸ್ತ್ರೀಯರು ಆಚರಿಸತಕ್ಕದ್ದೆಂದು ವಿಧಿಯಿರುತ್ತದೆ. ಆ ಪ್ರಕಾರ ಆಚರಿಸದಿದ್ದರೆ ಅವರು ಈ ಪಾಪದಿಂದ ತಿರ್ಯಗ್ಯೋನಿಗಳಲ್ಲಿ ಜನ್ಮ ಹೊಂದಿ ಕಷ್ಟಪಡುವರೆಂದು ಹೇಳಿದೆ.



ಈ ದಿನ ಮಧ್ಯಾಹ್ನ ಕಾಲಕ್ಕೆ ನದಿಗೆ ಅಥವಾ ಯಾವದೊಂದು ಜಲಾಶಯಕ್ಕೆ ಹೋಗಿ ಉತ್ತರಣೆಯ ಕಡ್ಡಿಯಿಂದ ದಂತಧಾವನಮಾಡಿ ವಿಧವೆಯರು ಗೋಮಯಾದಿಗಳಿಂದಲೂ, ಸೌಭಾಗ್ಯವತಿಯರು ಅರಿಶಿಣದಿಂದಲೂ ಲೇಪನಮಾಡಿಕೊಂಡು ಸ್ನಾನಮಾಡಬೇಕು. ಪಂಚಗವ್ಯಪ್ರಾಶನಮಾಡಿ ಸಪ್ತರ್ಷಿಗಳನ್ನು ಪೂಜಿಸಿ ಬ್ರಾಹ್ಮಣರಿಗೆ ದಕ್ಷಿಣಾ, ವಾಯನಾದಿಗಳನ್ನು ಕೊಡುವದು. ಈ ಪ್ರಕಾರ ಏಳು ವರ್ಷಗಳವರೆಗೆ ಈ ವ್ರತವನ್ನಾಚರಿಸಿ ಉದ್ಯಾಪನಮಾಡತಕ್ಕದ್ದು. ಈ ದಿನ ಎತ್ತುಗಳಿಗೆ ಶ್ರಮಕೊಟ್ಟು ಬೆಳೆಸದಿರುವ ಅಡವಿಯ ಕಂದಮೂಲಗಳನ್ನೂ ಧಾನ್ಯಗಳನ್ನೂ ಉಪ್ಪನ್ನೂ ಮಾತ್ರ ಆಹಾರ ಮಾಡತಕ್ಕದ್ದು.

ಈ ವ್ರತದ ಪ್ರಚಾರವು ಮಹಾರಾಷ್ಟ್ರ ಹಾಗೂ ಕೊಂಕಣಪಟ್ಟಿಯ ಕೆಲವು ಬ್ರಾಹ್ಮಣಸ್ತ್ರೀಯರಲ್ಲಿ ಮಾತ್ರ ಕಂಡು ಬರುತ್ತದೆ. ಸ್ತ್ರೀಗೆ ಋತುವಾಗುವದು ನಿಂತ ಮೇಲೆ ಅಂದರೆ ಸಾಧಾರಣವಾಗಿ ನಲ್ವತ್ತೈದು ಐವತ್ತು ವರ್ಷ ವಯಸ್ಸಿನಲ್ಲಿ ಈ ವ್ರತವನ್ನಾಚರಿಸುವ ರೂಢಿಯಿರುತ್ತದೆ. ತ್ವಷ್ಟೃ ಪ್ರಜಾಪತಿಯು, ವಿಶ್ವರೂಪನೆಂಬ ತನ್ನ ಮಗನನ್ನು ಇಂದ್ರನು ಕೊಂದ ಸಿಟ್ಟಿನಿಂದ ಮಾರಣಹೋಮಮಾಡಿ ವೃತ್ರನೆಂಬ ಮಗನನ್ನು ಪಡೆದನು. ಮಂತ್ರೋಚ್ಚಾರಣೆಯ ಕಾಲಕ್ಕಾದ ಸ್ವರಭೇದದಿಂದ ಆ ಮಗನು ಇಂದ್ರನನ್ನು ನಾಶ ಮಾಡುವವನಾಗದೆ ಇಂದ್ರನಿಂದ ನಾಶಮಾಡಲ್ಪಡುವವನಾದನು. ಈ ವೃತ್ರನನ್ನು ನಾಶಮಾಡಿದ್ದರಿಂದ ಇಂದ್ರನಿಗೆ ಬ್ರಹ್ಮಹತ್ಯಾದೋಷವು ಬಂತು. ಈ ದೋಷವನ್ನು ಅವನು ಬ್ರಹ್ಮನ ಹೇಳಿಕೆಯಂತೆ ನಾಲ್ಕು ಭಾಗ ಮಾಡಿ ಅಗ್ನಿಯ ಪ್ರಥಮ ಜ್ವಾಲೆಯಲ್ಲೂ ನದಿಯ ಪ್ರಥಮ ನೀರಲ್ಲೂ, ಗಿರಿವೃಕ್ಷ ಭೂಮಿಗಳಲ್ಲೂ, ಸ್ತ್ರೀಯರ ರಜಸ್ಸಿನಲ್ಲೂ, ಇಟ್ಟನು. ಅಂತು ಸ್ತ್ರೀಯರ ರಜೋದರ್ಶನವೇ ಬ್ರಹ್ಮಹತ್ಯಾಪಾಪದರ್ಶಕವಾದ್ದರಿಂದ ಆ ಕಾಲಕ್ಕೆ ಅವರು ಅಶುಚಿಗಳೂ ಅಸ್ಪೃಶ್ಯರೂ ಆದರು. ಆ ಕಾಲಕ್ಕೆ ತಿಳಿದಾಗಲಿ ತಿಳಿಯದೆಯಾಗಲಿ ಸ್ತ್ರೀಯರಿಂದ ಸ್ಪೃಶ್ಯಾಸ್ಪೃಶ್ಯ ದೋಷವುಂಟಾಗುವದು ಸಹಜವು. ಈ ದೋಷದಿಂದುಂಟಾದ ಜನ್ಮಾಂತರೀಯ ಪಾಪದಿಂದ ವಿದರ್ಭದೇಶದ ಉದಂಕನೆಂಬ ಬ್ರಾಹ್ಮಣನ ವಿಧವೆಯಾದ ಮಗಳು ಮೈಯ್ಯಲ್ಲೆಲ್ಲಾ ಕ್ರಿಮಿಯಾಗಿ ಕಷ್ಟಪಟ್ಟಳೆಂದೂ ಈ ವ್ರತವನ್ನಾಚರಿಸಿ ಸುಖಹೊಂದಿದಳೆಂದೂ ಕಥೆಯಿದೆ. ಇದರಂತೆ ಭವಿಷ್ಯೋತ್ತರ ಪುರಾಣದಲ್ಲೂ ಒಂದು ಕಥೆಯಿದೆ-'ವಿದರ್ಭದೇಶದಲ್ಲಿ ಸುಮಿತ್ರನೆಂಬ ಬ್ರಾಹ್ಮಣನಿದ್ದನು. ಅವನ ಹೆಂಡತಿಯು ರಜಸ್ವಲೆಯಾದಾಗ ಸ್ಪೃಷ್ಟಾಸ್ಪೃಷ್ಟ ದೋಷವಾಗಿ ಹೆಂಡತಿಯು ನಾಯಿಯಾಗಿಯೂ ಗಂಡನು ಬಸವನಾಗಿಯೂ ಹುಟ್ಟಿ ತಮ್ಮ ಮಗನ ಮನೆಯಲ್ಲೆ ಇದ್ದರು. ಒಂದು ದಿನ ಮಗನು ಮಾಡುವ ಶ್ರಾದ್ಧವು ಬಂದಿತ್ತು. ಇದಕ್ಕಾಗಿ ತಯಾರಿಸಿದ ಪಾಯಸದಲ್ಲಿ ಸರ್ಪ ವಿಷಬಿದ್ದದ್ದನ್ನು ಮನೆಯವರು ಯಾರೂ ನೋಡದಿದ್ದರೂ ಹೊರಗೆ ನಿಂತಿದ್ದ ನಾಯಿಯು ನೋಡಿ ಮುಂದಾಗುವ ಅನರ್ಥವನ್ನು ಲಕ್ಷಿಸಿ ಆ ಪಾತ್ರೆಯನ್ನು ಮುಟ್ಟಿ ಅಶುಚಿಯಾಗಿ ಮಾಡಿತು; ಕಾರಣ ಆ ನಾಯಿಯನ್ನು ಮನೆಯವರು ಚೆನ್ನಾಗಿ ಹೊಡೆದರು. ಮುಂದೆ ಅದು ತನಗಾದ ಪೀಡೆಯನ್ನು ತನ್ನ ಹಿಂದಿನ ಜನ್ಮದ ಗಂಡನಾದ ಬಸವನ ಕಡೆಗೆ ಹೇಳುತ್ತಿರುವುದನ್ನು ಆ ಮನೆಯ ಯಜಮಾನನು ಅಂದರೆ ಅವರ ಮಗನು (ಪಶುಭಾಷಾಭಿಜ್ಞನಾದ್ದರಿಂದ) ತಿಳಿದು ಅವರ ಕಷ್ಟಪರಿಹಾರದ ಉಪಾಯವನ್ನು ಬ್ರಾಹ್ಮಣರಿಂದ ಕೇಳಿಕೊಂಡು ಈ ಋಷಿಪಂಚಮಿ ವ್ರತವನ್ನಾಚರಿಸಿ ಅವರ ದೋಷವು ನಿವೃತ್ತಿಯಾಗುವಂತೆ ಮಾಡಿದನು.

*(ಮುಂದುವರಿಯುವುದು)*

PAGE DONATED BY : **HEGDE HOSPITAL, CHEMBUR,** COURTESY : **DR. DINESH HEGDE**

# ಮುಂಬೈ ಕನ್ನಡ ಕವಿಗಳು : ವಿ. ಜಿ. ಭಟ್

ಶೈಲಜಾ ಹೆಗಡೆ, ಮುಂಬಯಿ

*(ಕಳೆದ ಸಂಚಿಕೆಯಿಂದ)*

‘ಧ್ವನಿರಾತ್ಮಾ ಕಾವ್ಯಸ್ಯ’ ಧ್ವನಿಯೇ ಕಾವ್ಯದ ಆತ್ಮ ಎಂಬ ಆನಂದ ವರ್ಧನನ ಉಕ್ತಿಯಂತೆಯೇ, ಕವಿ ವಿ. ಜಿ. ಭಟ್ಟರು ‘ಧ್ವನಿ ಇಲ್ಲದ್ದು ಕಾವ್ಯವೇ ಅಲ್ಲ. ಕಾವ್ಯದ ಈ ನಾದ ಪ್ರಪಂಚ ಕಾವ್ಯ ಸೃಷ್ಟಿಕ್ರಿಯೆಯ ‘ಎಚ್ಚರ’ದ ಆಚೆಯದು. ನಿರಾಯಾಸ ಬರವಣಿಗೆಗೆ ತಂತಾನೇ ಇರುವ ಧ್ವನಿ, ತಿಣುಕಿ ಬರೆದ ಕಾವ್ಯದಲ್ಲಿ ಬರುವದಿಲ್ಲ. ಶಬ್ದಗಳನ್ನು ಪೋಣಿಸುವದಕ್ಕೂ ಶಬ್ದ ಕವಿತೆಯಾಗುವದಕ್ಕೂ ಮಹದಂತರವೇ ಇದೆ’ ಎಂದು ಕಾವ್ಯದ ಲಕ್ಷಣವನ್ನು ತರಂಗ ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಬಣ್ಣಿಸಿದ್ದಾರೆ. ಇದನ್ನು ಸ್ಪಷ್ಟೀಕರಿಸುವ ಅವರ ಕವಿತೆಯ ಕೆಲವು ಸಾಲುಗಳು ಗಮನಾರ್ಹ.

ಭಾವಧಾರೆಯಲಿ ತೇಲುತ ಸಾಗುವ  
ಶಬ್ದಗಳಿಗೆ ಇದೆ ಶೈಲಿ  
ಅವುಗಳದೇನೇ ಛಂದವು ಅರ್ಥವು  
ಏನಿದೆ ಈತನ ಕೈಲಿ?

ಕವಿಯ ಭಾವಧಾರೆಯಲ್ಲಿ ತೇಲುತ್ತ ಸಾಗುವ ಶಬ್ದಗಳಿಗೆ ಕವಿಯ ಹಿಡಿತವನ್ನೂ ಮೀರಿದ ಶೈಲಿ ಇದೆ ಎಂಬುದು ವಿ. ಜಿ. ಭಟ್ಟರ ಅನುಭವ ಗಮ್ಯ ನುಡಿಯಾಗಿದೆ. ‘ಹಿಂದಿರುವ ಭಾವಕ್ಕೆ ತಕ್ಕ ಬಿಡುಗಡೆ ಕೊಡುವ ಬೇರೊಂದು ಲಯ ತಾನಾಗಿ ಮೂಡಿ ಬರುವವರೆಗೂ ನಾನು ಕೈಲಿರುವ ಶಿಸ್ತಿನಲ್ಲೇ ಬರೆಯುವೆ. ಬರೆಯುವಾಗ ಪ್ರಾಸಗಳು ಬಂದ ರೀತಿ, ಅವು ನನ್ನನ್ನು ಸೆಳೆದೊಯ್ದ ರೀತಿ, ಒಂದನ್ನೊಂದು ಸೇರಿ ಅವು ಒಳಗಿನ ಇನ್ನೊಂದನ್ನೇ ಹೊರ ಹಾಕಿದ ರೀತಿ-ಇವೆಲ್ಲ ನನ್ನ ಪಾಲಿಗೆ ಅಪೂರ್ವವಾದ ಕಾವ್ಯಾನುಭವವನ್ನು ಉಳಿಸಿವೆ’ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬೇಂದ್ರೆಯವರ ಕುರಿತು ಅವರಿಗೆ ಅಪಾರ ಗೌರವವಿತ್ತು. ಇದನ್ನು ಸೂಚಿಸುವ ಒಂದೆರಡು ಕನಸಿನ ದೃಷ್ಟಾಂತಗಳು ಪ್ರಸ್ತುತ ಸಂದರ್ಶನದಲ್ಲಿ ರೋಚಕವಾಗಿ ಮೂಡಿಬಂದಿವೆ. ಅವರದೇ ಮಾತಿನಲ್ಲಿ, ‘ಧಾರವಾಡದಲ್ಲಿದ್ದಾಗ ನಾನು ಬೇಂದ್ರೆಯವರೊಂದಿಗೆ ನನ್ನ ಕನಸುಗಳನ್ನು ಚರ್ಚಿಸುತ್ತಿದ್ದೆ. ನನ್ನ ಕನಸುಗಳಿಗೆ ಬೇಂದ್ರೆಯವರು ಕೊಡುತ್ತಿದ್ದ ವಿವರಣೆಗಳು ವಿಸ್ಮಯಗೊಳಿಸುವಷ್ಟು ನಿಜವಾಗುತ್ತಿದ್ದವು. ಕಡತೋಕೆಯ ಬಾಲ್ಯದಲ್ಲಿ ನನ್ನ ಕನಸಲ್ಲಿ ಪದೇ ಪದೇ ಹುಲಿ ಬರುತ್ತಿತ್ತು. ಹೂಂಕರಿಸುತ್ತ ಬಿಸಿ ಬಿಸಿಯಾಗಿ ಮನೆಯೊಳಗೆ ಸುತ್ತಾಡುವ ಹುಲಿಗೆ ನಾನು ಬೆಚ್ಚಿಬಿದ್ದು ಕೂಗಿಕೊಳ್ಳುತ್ತಿದ್ದೆ. ಬೇಂದ್ರೆಯವರು ಹೇಳಿದರು. ‘ನಿಮಗೆ ಖಂಡಿತ ಕರುಳಿನ ಬೇನೆ ಇದ್ದಿರಲಿಕ್ಕೆ ಸಾಕು’ ಎಂದು. ನನಗೆ ನಿಜಕ್ಕೂ ಕರುಳಿನ ಬೇನೆ ಇತ್ತು. ಒಮ್ಮೆ ನನಗೆ ಕೆಲಸದ ಸಂದರ್ಭದಲ್ಲಿ ಅಂಡಮಾನಕ್ಕೆ ವರ್ಗವಾಗುವ ಪ್ರಮೇಯವಿತ್ತು. ಆ ಸಂದರ್ಭದಲ್ಲಿ ಬಿದ್ದ ಕನಸೊಂದನ್ನು ಕೇಳಿ ಬೇಂದ್ರೆಯವರು ‘ನೀವು ಖಂಡಿತ ಹೋಗುವುದಿಲ್ಲ’ ಎಂದರು. ಹಾಗೇ ಆಯಿತು. ಇದು ಕೇವಲ ಮೇಲ್ನೋಟದ ಮಾತುಕತೆಯಾಗಿರದೆ, ಕವಿ ಹೃದಯಗಳ ಆತ್ಮೀಯ ಸಂಭಾಷಣೆಯಾಗಿದೆ.

ಕಾವ್ಯ ರಚನೆ ಒಂದು ಉದ್ಯೋಗವಾದದ್ದು, ಉಪಾಸನೆಯ ಹಂತವನ್ನು ತಲುಪಿರುವ ಬಗೆಯನ್ನೂ ತಮ್ಮ ಮಾತುಗಳಲ್ಲಿ ಅವರು ಸ್ಪಷ್ಟಪಡಿಸಿದ್ದಾರೆ.



‘ಇಷ್ಟು ದಿನ ಕಾವ್ಯ ನನಗೆ ಕಸುಬಾಗಿತ್ತು. ಒಂದು ಉದ್ಯೋಗವಾಗಿತ್ತು. ಈಗ ನನಗೆ ಅದು ಉಪಾಸನೆ ಆಗಿದೆ. ಕಾವ್ಯ ಅಥವಾ ಅದಕ್ಕಿಂತ ಎಷ್ಟೋ ಪಾಲು ಮಿಗಿಲಾದ ಬದುಕನ್ನು ಕಸುಬಾಗಿಯೋ ಉದ್ಯೋಗವಾಗಿಯೋ ಕೊರಗಿಸುವದಕ್ಕಿಂತ ಉಪಾಸನೆಯಾಗಿ ಅರಳಿಸುವುದರಲ್ಲಿ ನನ್ನಿರವಿನ ಸಾರ್ಥಕ್ಯ ಇದೆಯೇನೋ ಅನಿಸುತ್ತದೆ’. ಕವಿಗೆ ಕಾವ್ಯ ಮತ್ತು ಜೀವನ ಬೇರೆಬೇರೆಯಲ್ಲ ಎಂಬುದು ಇದರಿಂದ ವೇದ್ಯವಾಗುತ್ತದೆ. ವಿ.ಜಿ. ಭಟ್ಟರ ಕಾವ್ಯವನ್ನು ಚೆನ್ನಾಗಿ ಅರ್ಥೈಸಿಕೊಳ್ಳಲು ಈ ಸಂದರ್ಶನ ಅತ್ಯಂತ ಸಹಕಾರಿಯಾಗಬಲ್ಲುದು.

ನಮ್ಮೊಳಗಿನ ನಿಶ್ಶಬ್ದದಿಂದ ಹೊರಬಂದ ಶಬ್ದಕ್ಕೆ ಮಹತ್ವವಿದೆ. ಹೊರಗಿನ ಶಬ್ದಕ್ಕೆ ಮರುದನಿ ನೀಡುವುದು ವ್ಯರ್ಥ ಎನ್ನುವ ಕವಿ ನಮ್ಮ ಒಳಗಣ್ಣನ್ನು ತೆರೆಯುವ ವಿಧಾನವನ್ನೂ ವಿವರಿಸಿದ್ದಾರೆ.

ನಿನ್ನೊಳಗಿನಿಂದ, ನಿಶ್ಶಬ್ದದಿಂದ  
ಹೊರಬಂದ ಶಬ್ದಕಿದೆ ಅರ್ಥ  
ಹೊರಗಿಂದ ಬಂದ ಶಬ್ದಗಳ ನೀನು  
ಮರುದನಿಸಲೇಕೆ ವ್ಯರ್ಥ?

ಸಮ್ಯಕ್ ಶ್ರವಣವ ಅರಿತರೆ ತಿಳಿಯುವೆ  
ಶೂನ್ಯದ, ಮೌನದ ಭಾಷೆ  
ಮೌನದಿಂದ ಬಂದೊಂದೇ ಶಬ್ದವು  
ತಣಿಸುವದೆಲ್ಲ ಪಿಪಾಸೆ

*(ಮುಂದುವರಿಯುದು)*

## DONATIONS

### HWT - Education Fund

| | | |
|---|---|---|
| 1. | R. T. Bhatshikar | Rs. 2,00,000 |
| 2. | Pidilite Industries Ltd., (Through Chidanand Bhagwat) | Rs. 25,000 |
| 3. | Jaya S. Hegde Ummachgi | Rs. 8,000 |

### HWT - Havyaka Welfare Trust

| | | |
|---|---|---|
| 1. | Ramana Bhat | Rs. 2,000 |
| 2. | R. N. Kameshwar | Rs. 1,000 |
| 3. | Rajaram Hegde | Rs. 1,000 |
| 4. | Sunanda Bhat | Rs. 500 |
| 5. | R. V. Joshi | Rs. 500 |
| 6. | Praveen Hegde, Goregaon | Rs. 500 |

*PAGE DONATED BY : **SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR***

# Significance of Shri Ramacharitamanasa

✍ **Shraddha Hegde** (BE-Engg)

***Prathama Sopaana-Balakanda :***



With the company of good people even the wicked person becomes better. Tulsidas compares it to a metal which gets converted to gold when comes in contact with philosopher's stone (Paras). On the other hand, if good people get into evil company by any chance, they do not change their noble character. just like the precious gem present in the hood of the poisonous serpent. Such is the glory of pure souls that even Brahma, Vishnu, shiva, poets and pandits hesitate to recite. Tulsidas feels impossible to describe the qualities of pious people by taking the example of a vegetable vendor who is incapable to describe to qualities of gem. He offers his salutations to the saints who are even minded towards all. They neither have friends nor enemies. They are like the flower paced in the palm where it spreads its fragrance to both the hands alike. Saints and noble people are simple and trustworthy which makes them beneficial for society. Tulsi requests them to bless him and place him in devotion to lord Rama.

Tulsidas bows down with a sincere heart to the evil people who turn hostile to their own friends, who feel pain seeing others prosperity and those who find gain in others loss, who burn with jealousy hearing upon others welfare. They should also do their part. They are like Sahasrabaahu who finds faults in others by their thousand eyes. They are rich in crime as Kubera-the god of riches is in gold. They utilize their Life to bring harm to others just like the hailstones dissolves itself after destroying the crops. However, fondly we treat the brood of crows, we cannot stop them from eating meat. Great sage Tulsi says both saints and evil people give pain. We feel pain when we part away from saints while the latter gives pain when they come closer and meet us. Although born together in the same water there is a vast difference between lotus and leech. Such is the difference between good and bad people who resemble nectar i.e., having immortal qualities and wine which is poisonous to our health respectively. Based on their traits good people are attracted to goodness and vice-versa. It is important to know both these qualities and discuss their stories so that we can make a proper judgement in life i.e., dos and don'ts.

*(To be continued...)*

# ನಿವಾಳಿಸಿ ಬಿಟ್ಟ ಕೋಳಿ – ಕಥನ ಕೌಶಲದ ಕತೆಗಳು

✍ **ಸುಬ್ರಾಯ ಚೊಕ್ಕಾಡಿ**

**ನಿವಾಳಿಸಿ ಬಿಟ್ಟ ಕೋಳಿ**
ಲೇ : ಅನಿತಾ ಪಿ. ತಾಕೊಡೆ
ಪ್ರಕಾಶಕರು : ಸ್ನೇಹ ಎಂಟರ್‌ಪ್ರೈಸಸ್
ಪುಟ : 216
ಬೆಲೆ ರೂ : 220



ನಮ್ಮ ದೈನಿಕದ ಬದುಕಲ್ಲಿ ಕ್ರಮಭಂಗವಾದಾಗ ಕಥೆ ಹುಟ್ಟುತ್ತದೆ. ನಮ್ಮ ಹಿರಿಯ ಕಥೆಗಾರ ಮಾಸ್ತಿಯವರು ಕಥೆಯ ಸ್ವರೂಪವನ್ನು ಕುರಿತು ಹೇಳುವಂತೆ, ಕಥೆಯೆನ್ನುವುದು ಕಥಿತ ವಸ್ತು. ಅದರ ಮುಖ್ಯ ಲಕ್ಷಣ ಕಥನ; ಅದರ ಹಿರಿಯ ಗುಣ ಕಥನದಲ್ಲಿ ಕೌಶಲ. ಅನಿತಾ ಅವರ ಕಥೆಗಳನ್ನು ಓದುತ್ತಾ ಹೋದಂತೆ ಈ ಮಾತುಗಳು ನೆನಪಾದವು. ಅವರ ಕಥೆಗಳಲ್ಲಿ ಕಥೆ,ಕಥನ ಹಾಗೂ ಕಥನದಲ್ಲಿ ಕೌಶಲ ಎಲ್ಲವೂ ಹದವಾಗಿ ಮಿಳಿತವಾಗಿದೆ. ವಿಪುಲ ವಸ್ತುವೈವಿಧ್ಯ, ಹುಸಿಹೋಗದ ನಿರೂಪಣಾ ತಂತ್ರ ಹಾಗೂ ಸಾವಧಾನದ ನಡೆ, ಕಟ್ಟಿಕೊಡುವ ಬದುಕಿನ ಆಪ್ತಚಿತ್ರಗಳು....ಎಲ್ಲವನ್ನೂ ಈ ಕಥೆಗಳಲ್ಲಿ ಕಾಣಬಹುದು. ವಾಸ್ತವ ಹಾಗೂ ಮಾಯಾವಾಸ್ತವದ ಸಂಯೋಜನೆಯ ಹಿನ್ನೆಲೆಯಲ್ಲಿ ತಂದೆ ಮಗಳ ಅನ್ಯೋನ್ಯ ಬದುಕಿನ ಚಿತ್ರವನ್ನು ಕಟ್ಟಿಕೊಡುವ ಕ್ಲೋಸ್ಡ್ ಎಂಡ್ ಕಥೆ "ಅಪ್ಪನೆಟ್ಟ ಸೀತಾ ಫಲದ ಮರ", ಸಂಭಾಷಣೆಗಳ ಮೂಲಕವೇ ಕಥೆಯನ್ನು ಹೆಣೆದ "ಭಾವನೆಗಳಿಲ್ಲದ ಬದುಕಿನತ್ತ", "ಮಧುರ ಭಾವದ ಹೊಳೆಯಲ್ಲಿ" ಯಂತಹ ಓಪನ್ ಎಂಡ್ ಕಥೆಗಳು, "ಭ್ರಮೆಯ ತೆರೆ ಸರಿದಾಗ", "ಇರುಳಿನ ಕರೆ", "ಸೆಲ್ವ ಕುಮಾರನ ಸಂಸಾರ ಸೂತ್ರ", ಮೊದಲಾದ ಕೆಲವು ಕಥೆಗಳು ನನಗೆ ಇಷ್ಟವಾದವು. ಹಾಗೆಂದು ಎಲ್ಲಾ ಕಥೆಗಳು ಚೆನ್ನಾಗಿವೆ ಎನ್ನಲಾಗದು. "ಸುಳಿಯಲ್ಲಿ ನಲುಗಿದ ನಾವೆ", "ಬಾಳ ನೌಕೆಯಲ್ಲಿ" ಯಂತಹ ಕೆಲವು ಕಥೆಗಳಲ್ಲಿ ಕಾದಂಬರಿಗಾಗುವಷ್ಟು ವಿವರಗಳಿವೆ. ಕೆಲವು ಕಥೆಗಳಲ್ಲಿ ಕೇಂದ್ರದ ಕಡೆಗಿರಬೇಕಾಗಿದ್ದ ಫೋಕಸ್ ಚದುರಿದಂತಿದೆ. "ದತ್ತ"ದಂತಹ ಕೆಲವು ಸಾಮಾನ್ಯ ಕಥೆಗಳೂ ಇವೆ. ಆದರೂ ಒಟ್ಟಾಗಿ ಹೇಳುವುದಾದರೆ ಈ ಕಥೆಗಳ ಮೂಲಕ ಅನಿತಾ ಅವರು ಒಳ್ಳೆಯ ಕಥೆಗಾರ್ತಿಯಾಗಿ ಹೊಮ್ಮಿದ್ದಾರೆ ಎಂಬುದಂತೂ ಖಚಿತ. ಅಭಿನಂದನೆಗಳು.

*PAGE DONATED BY :* ***AKADAS & FAMILY***

# NOISE AND MUSIC

✍ **L. V. Shastri, Bengaluru**

Noise denotes unwanted, unpleasant sound. Music has qualities that are contrary to noise. However, it turns out that what becomes noise or music also depends on external factors like place or time and of course the listeners. In other words, it becomes subjective and, more often than not, a matter of perception. Youngsters playing karaoke music can be intolerable noise to elderly members in a family.

Noise and music, put together, are vibrations. Vibration happens to be one of the fundamental properties of matter. When the wavelength / frequency of vibrations falls in the audible range we perceive them as sound - may be noise or music. Of course, similar thing applies for sight. The wavelength / frequency of light should fall in the visible range for our eyes to perceive the objects. However there are countless frequencies, constantly playing out, which we can perceive only by using suitable gadgets, thereby surmounting the limitations of our sense organs.

It is no surprise that one thought leads to another, to yet another and so on. Just thinking about noise / music as just a case of the universal vibrations has given a pause at Perceptions! Signals of vibrations involving sound or light are received and interpreted by our brain. However, such an action forms a very small part in the overall functioning of the brain which is basically behind all of our voluntary and involuntary actions and activities. Often enough, our actions and activities are a matter of perception where the entity called Mind starts playing a role. As we all know, the mind can be sane and impassive or naughty and mischievous. This fact gives rise to a whole spectrum of perceptions at any given situation, leading to a spectrum of consequences!

As a working model, it may be fair to say that the brain senses / receives and records things and the mind starts reacting which we can call perception. Brains of two individuals would receive identical things. However the reaction / response from the minds of the two individuals may be same or different, even vastly. That is how / why what is music to one may be noise to another!

Perception and the limitations thereof are behind most actions that are undertaken. It may be at the level of individuals, societies, nations and so on. At the level of individuals, relationships with friends, acquaintances or family members would be outcome of perceptions in any given situation. It is not uncommon that misunderstandings among individuals arise due to difference in the perception of a given situation and attendant undesired outcomes. Many dilemmas in one's mind, like 'what to do' or 'to do or not to do' arise due to improper perceptions.



We all know that perception about Dharma, righteousness, forms the basis for expounding Bhagavad Gita by Lord Krishna. When Arjun expresses total reluctance to fight, Krishna asks him 'how come you are overcome by such an unmanly thought, not befitting a warrior, at this crucial juncture?' He goes on to answer other queries by Arjun, thus presenting the timeless Gita in its totality. As a final step, he makes Arjun battle ready by showing his divine reality, Vishwaroop.

In recent history, Robert Oppenheimer, hailed as the father of Atomic Bomb, was an ardent student of Gita which he read in Sanskrit. Gita to him was 'the most beautiful philosophical song existing in any known tongue'. The scene from the first detonation of the atomic bomb made him to remember the words of Krishna and exclaim 'Now I am become Death, the destroyer of worlds' (Gita, 11, 32). Shortly afterwards, dropping atomic bomb on Hiroshima and Nagasaki destroyed thousands of lives and stirred the conscience of Oppenheimer who later opposed nuclear armament. However, he seems to have drawn consolation from the fact that dropping bombs on Japan when world war II was raging helped to cripple the military might of Japan which surrendered thus ending World War II, which otherwise would have destroyed millions of lives and property. In other words, he developed the perception that as a scientist, his Dharma, duty, was to deliver the atomic bomb at that point in time. Such a perception was in line with the advice of Lord Krishna to Arjun to take up arms and fight as a warrior should. The movie 'Oppenheimer' has been recently released worldwide.

In summary, perception plays a vital role in the doing / undoing, making / unmaking on many occasions. At any time when an avoidable conflict erupts, it would help the persons concerned to pause and think as to whether a better perception would help resolve the conflict and settle matters amicably and peacefully. At the level of individuals, due allowance may be made for the fact that everyone would like to enjoy freedom in any action / activity that one may take up. As corollary to this, it would be essential that one's expression of freedom does not infringe on / trespass / violate the freedom of others. Needless to say, such an attitude would greatly help in avoiding conflicts at all levels and earning the most valuable peace. ❍

*PAGE DONATED BY :* ***SHRI N. R. HEGDE, DOMBIVLI***

# ನಾಡಿನ ಸಾಮಾನ್ಯರಿಗೂ ಅರ್ಥವಾಗಬೇಕಾಗಿರುವ ಅರ್ಥಶಾಸ್ತ್ರ

✍ ಡಾ. ಜಿ. ವಿ. ಜೋಶಿ

ಪ್ರಜಾಪ್ರಭುತ್ವದ ಬಲವರ್ಧನೆಗೆ ಅರ್ಥಶಾಸ್ತ್ರದ ಅಧ್ಯಯನ ಅಗತ್ಯವೆಂದು ತೋರಿಸುವ ಉದ್ದೇಶದಿಂದಲೇ ಆರ್ಥಿಕ ತಜ್ಞೆ ಬಾರ್ಬರಾ ವೂಟನ್ ದಶಕಗಳ ಹಿಂದೆಯೇ 'ಅರ್ಥಶಾಸ್ತ್ರದ ಅರಿವು ಇಲ್ಲದ ಯಾವುದೇ, ಪುರುಷನಾಗಲಿ ಅಥವಾ ಮಹಿಳೆಯಾಗಲಿ ಒಂದು ದೇಶದ ನಾಗರಿಕನೆಂದು ಹೇಳಿಕೊಳ್ಳಲು ಸಾಧ್ಯವಿಲ್ಲ' ಎಂದು ಘೋಷಿಸಿದ್ದರಲ್ಲಿ ಸತ್ಯಾಂಶವಿದೆ. ಈಗ ಅರ್ಥಶಾಸ್ತ್ರ ಬೆಳೆದು 700ಕ್ಕೂ ಶಾಖೆ-ಉಪಶಾಖೆಗಳನ್ನು ಹೊಂದಿದೆ. ಇವುಗಳಲ್ಲಿ ಜನ ಸಾಮಾನ್ಯರಿಗಾಗಿ ಅರ್ಥಶಾಸ್ತ್ರ ಕೂಡ ಸೇರಿಕೊಂಡಿದೆ.

ನವ ದೆಹಲಿಯಲ್ಲಿರುವ ಶಿಕ್ಷಣದ ಸಂಶೋಧನೆ ಮತ್ತು ತರಬೇತಿಗೆ ಸಂಬಂಧಿಸಿದ ರಾಷ್ಟ್ರೀಯ ಮಂಡಳಿಯ ಆಡಳಿತದಲ್ಲಿರುವ ಸಾಮಾಜಿಕ ವಿಜ್ಞಾನಗಳ ಶಿಕ್ಷಣ ವಿಭಾಗ ಭಾರತದಲ್ಲಿ ಅರ್ಥಶಾಸ್ತ್ರದ ಬೋಧನೆಗೆ ಬೇಕಾದ ಮಾಹಿತಿಯುಳ್ಳ ಕೈಪಿಡಿ ನೀಡಿ ಉಪಕಾರ ಮಾಡಿದ್ದು ಹೌದು. ಆದರೆ ಜನಸಾಮಾನ್ಯರಿಗೆ ಈ ಶಾಸ್ತ್ರದ ಬೋಧನೆಯ ಅಗತ್ಯವನ್ನು ಎಲ್ಲೂ ಪರಿಗಣಿಸದಿರುವುದು ಅಸಮಾಧಾನ ಹುಟ್ಟಿಸುವ ಸಂಗತಿ.

ಗಣಿತಶಾಸ್ತ್ರ, ಸಂಖ್ಯಾಶಾಸ್ತ್ರ ಮತ್ತು ಗಣಿತ ಆಧಾರಿತ ಅರ್ಥಶಾಸ್ತ್ರ (ಎಕೊನೊಮೆಟ್ರಿಕ್ಸ್)ಗಳ ಹೆಚ್ಚಿದ ಬಳಕೆ ಅರ್ಥಶಾಸ್ತ್ರಕ್ಕೆ ಮೆರಗು ತಂದಿದ್ದು ನಿಜ. ಆದರೆ ಜನಸಾಮಾನ್ಯರಿಗೆ ಹತ್ತಿರವಾಗಬೇಕಾದ ಸರಳವಾದ ಅರ್ಥಶಾಸ್ತ್ರದ ಅಗತ್ಯವನ್ನಾಗಲಿ, ಉಪಯೋಗವನ್ನಾಗಲಿ ಮರೆತು ಬಿಡುವುದು ಸರಿಯಲ್ಲ. ಹಿಂದೆ ತಮ್ಮ ಕ್ಷೇಮಾಭಿವೃದ್ಧಿ ಅರ್ಥಶಾಸ್ತ್ರದಲ್ಲಿ ಗಣಿತ ಆಧಾರಿತ ವಿಧಾನಗಳನ್ನು ಅಳವಡಿಸಿಕೊಂಡು ನೊಬೆಲ್ ಪಾರಿತೋಷಕ ಪಡೆದ ಅಮಾರ್ತ್ಯಸೇನ್ ಇತ್ತೀಚಿನ ದಿನಗಳಲ್ಲಿ ಈ ವಿಧಾನಗಳನ್ನು ಬಳಸದೇ ಅರ್ಥಶಾಸ್ತ್ರವನ್ನು ಶ್ರೀಮಂತಗೊಳಿಸಿದ್ದನ್ನು ಗಮನಿಸಬೇಕು. ಸಾಮಾನ್ಯ ಜನರನ್ನೂ ಇದು ತಲುಪಬೇಕೆಂದು ವಾದಿಸುವವರಲ್ಲಿ ಅಮಾರ್ತ್ಯ ಸೇನ್ ಪ್ರಮುಖರು.

ಅರ್ಥಶಾಸ್ತ್ರದಲ್ಲಿ ಧಾರಾಳವಾಗಿ ಬಳಕೆಯಾಗುತ್ತಿರುವ ಎಷ್ಟೋ ಪಾರಿಭಾಷಿಕ ಪದಗಳು ಜನಸಾಮಾನ್ಯರ ಬದುಕಿನ ನೆಲದಲ್ಲಿ ಹುಟ್ಟಿ ಬೆಳೆದರೂ ಜನಸಾಮಾನ್ಯರಿಗೇ ಅರ್ಥವಾಗದ ರೀತಿಯಲ್ಲಿ ಮುದ್ರಿತ ಪುಸ್ತಕಗಳಲ್ಲಿ ಉಳಿದುಕೊಂಡಿವೆ. ಅವು ತಲುಪಬೇಕಾದವರನ್ನು ಇನ್ನೂ ತಲುಪಿಲ್ಲವೆನ್ನುವುದು ನೋವು ಹುಟ್ಟಿಸುವ ಸತ್ಯ. ಹೀಗಾಗಿ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಆರ್ಥಿಕ ನೀತಿಯಲ್ಲಿ ಬದಲಾವಣೆಯಾದಾಗ ಜನ ಸಾಮಾನ್ಯರಿಂದ ನಿರೀಕ್ಷಿತ ಪ್ರತಿಕ್ರಿಯೆ ಬಾರದಿರುವದರಿಂದ ಅದು ಸೋಲುತ್ತದೆ, ಹಳೆಯ ಸಮಸ್ಯೆಗಳು ಮುಂದುವರಿಯುತ್ತವೆ. ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುವ ಸಾಧ್ಯತೆ ಕೂಡ ಇದೆ.

ಈಗ ಸಾಮಾನ್ಯವಾಗಿ ದೀರ್ಘ ಚರಿತ್ರೆಯುಳ್ಳ ಆರ್ಥಿಕ ಬೆಳವಣಿಗೆ ಮತ್ತು ಆರ್ಥಿಕ ಅಭಿವೃದ್ಧಿ ನಡುವಣ ಭಿನ್ನತೆಯನ್ನು ಗುರುತಿಸುವ ಪ್ರಯತ್ನ ಇನ್ನಷ್ಟು ಸ್ಪಷ್ಟ ರೀತಿಯಲ್ಲಿ ಆಗಬೇಕು. ಒಮ್ಮೆ ಯುಪಿಎ ಸರಕಾರದಲ್ಲಿ ಪಿ. ಚಿದಂಬರಂ ವಿತ್ತ ಸಚಿವರಾಗಿದ್ದಾಗ ತಮ್ಮ ಬಜೆಟ್ ಭಾಷಣದ ಪ್ರಾರಂಭದಲ್ಲಿ ಈ ಭಿನ್ನತೆಯನ್ನು ಗುರುತಿಸಿದ್ದರು. ಆರ್ಥಿಕ ಬೆಳವಣಿಗೆ ಎಂದರೆ ರಾಷ್ಟ್ರದ ಒಟ್ಟು ಆಂತರಿಕ ಆದಾಯದಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದಾಗ ಆದ ಶೇಕಡಾವಾರು ಬದಲಾವಣೆಯ (ಸಾಮಾನ್ಯವಾಗಿ ಹೆಚ್ಚಳದ) ದರ. ಆರ್ಥಿಕ ಬದಲಾವಣೆಯ ಜತೆಗೆ ಆದ ಸಾಂಸ್ಥಿಕ ಬದಲಾವಣೆಗಳು (ಆದಾಯ ವಿತರಣೆಯಲ್ಲಾದ ಸುಧಾರಣೆ, ಜೀವನಮಟ್ಟದಲ್ಲಿ ಆದ ಪ್ರಗತಿ ಇತ್ಯಾದಿ) ಆರ್ಥಿಕ ಅಭಿವೃದ್ಧಿಯ ಸ್ವರೂಪಗಳು. ಈ ವ್ಯತ್ಯಾಸವನ್ನು ಜನಸಾಮಾನ್ಯರಿಗೂ ತಿಳಿಸುವ ಕಾರ್ಯ ನಡೆಯಬೇಕಾಗಿದೆ.



ಒಳಗೊಳ್ಳುವಿಕೆಯ ಅಭಿವೃದ್ಧಿಗೆ ಈಗ ಹೆಚ್ಚಿನ ಮಹತ್ವ ಬರುತ್ತಿರುವುದನ್ನು ಸಾಮಾನ್ಯ ಜನರೂ ಸರಿಯಾಗಿ ಗಮನಿಸುವುದು ಅಗತ್ಯ. ಕೇಂದ್ರ ಬಜೆಟ್ ಸಮಾಜದ ಎಲ್ಲಾ ವರ್ಗಗಳ ಮೇಲೆ ಒಂದಿಲ್ಲೊಂದು ರೀತಿಯಲ್ಲಿ ಪ್ರಭಾವ ಬೀರುತ್ತಿರುವುದರಿಂದಲೇ ಎಲ್ಲರೂ ಅದಕ್ಕೆ ಪ್ರತಿವರ್ಷ ಕಾದು ಕುಳಿತಿರುತ್ತಾರೆ. 2023-24ನೇ ಸಾಲಿನ ಬಜೆಟ್‌ನ ಪ್ರಾರಂಭದಲ್ಲೇ ಒಳಗೊಳ್ಳುವಿಕೆಯ ಅಭಿವೃದ್ಧಿಯ ಅಗತ್ಯವನ್ನು ತೋರಿಸಲಾಗಿದೆ, ಈ ತನಕ ಆದ ಅಭಿವೃದ್ಧಿಯ ಲಾಭಗಳಿಂದ ವಂಚಿತರಾದ ಸಾಮಾಜಿಕ ವರ್ಗಗಳಿಗೆ ಈ ಲಾಭಗಳನ್ನು ತಲುಪಿಸುವ ಪ್ರಕ್ರಿಯೆ ತೀವ್ರವಾದ ಆರ್ಥಿಕ ಅಸಮಾನತೆಯಿರುವ ನಮ್ಮ ಅರ್ಥಿಕತೆಯಲ್ಲಿ ಬೇಕಾದ ಒಳಗೊಳ್ಳುವಿಕೆಯ ಅಭಿವೃದ್ಧಿಯಾಗಿ ಹೊರ ಹೊಮ್ಮಲಿದೆ. ಇದು ದೇಶಾದ್ಯಂತ ಜನಸಾಮಾನ್ಯರಿಗೆ ತಿಳಿಯಬೇಕಾದ ಅಗತ್ಯವಿದೆ.

ರೆಪೊ ದರ, ರಿವರ್ಸ್ ರೆಪೊ ದರ, ಗುಣಕ, ವೇಗೋತ್ಕರ್ಷ-ಹೀಗೆ ಹಲವಾರು ಪದಗಳ ಬಳಕೆ ಕನ್ನಡದ ಪತ್ರಿಕೆಗಳಲ್ಲಿ ಆಗಾಗ ಆಗುತ್ತಲೇ ಇರುತ್ತದೆ. ಈ ಪರಿಕಲ್ಪನೆಗಳು ಸಾಮಾನ್ಯ ಓದುಗರಿಗೂ ಸುಲಭದಲ್ಲಿ ಅರ್ಥವಾಗುವ ರೀತಿಯಲ್ಲಿ ಬಳಕೆಯಾಗಬೇಕಾಗಿದೆ.

ಒಂದು ಕಾಲದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ರೂಢಿಯಲ್ಲಿದ್ದ ಸಂಪ್ರದಾಯವನ್ನು ಈಗ ನೆನಪಿಸಿಕೊಳ್ಳಬೇಕು. ಅರ್ಥಶಾಸ್ತ್ರದ ಆಧಾರ ಸ್ತಂಭಗಳಾದ ಆ್ಯಡಂ ಸ್ಮಿತ್, ಡೇವಿಡ್ ರಿಕಾರ್ಡೊ ಮತ್ತು ಸರ್ ರೋಬರ್ಟ್ ಮಾಲ್ಥಸ್ ಬರೆದ ಬೃಹತ್ ಗ್ರಂಥಗಳು ಇಂಗ್ಲೆಂಡಿನ ಜನಸಾಮಾನ್ಯರಿಗೆ ತಿಳಿಯುವಂತಿದ್ದವು. ಗಂಡು ಮತ್ತು ಹೆಣ್ಣು ಮಕ್ಕಳ ವಿವಾಹ ಹೊಂದಾಣಿಕೆಯ ಮಾತುಕತೆಗಳಾಗುವಾಗ ಈ ಅರ್ಥಶಾಸ್ತ್ರಜ್ಞರ ಪುಸ್ತಕಗಳ ಪ್ರಸ್ತಾಪವಾಗಿ ಅವನ್ನು ಓದಿದವರಿಗೆ ವಿಶೇಷ ಮೆಚ್ಚುಗೆ ವ್ಯಕ್ತವಾಗುತ್ತಿತ್ತು. ಅವುಗಳಿಗೆ ಆ ಕಾಲದಲ್ಲಿದ್ದ ಜನಪ್ರಿಯತೆಗೆ ಬೇರೆ ಸಾಕ್ಷಿ ಬೇಕಿಲ್ಲ. ಇಂಥ ಸಾಮಾಜಿಕ ಮಹತ್ವವುಳ್ಳ ಪುಸ್ತಕಗಳು ಜನಸಾಮಾನ್ಯರ ನೆರವಿಗಾಗಿ ಕನ್ನಡದಲ್ಲಿ ಈಗ ಪ್ರಕಟವಾಗಬೇಕು.

ಸಾಂಪ್ರದಾಯಿಕ ಅರ್ಥಶಾಸ್ತ್ರದ ದಾರಿಯಲ್ಲೇ ಮುನ್ನಡೆದ ಇಂಗ್ಲೆಂಡಿನ ಹೆಸರುವಾಸಿ ಆರ್ಥಿಕ ತಜ್ಞ ಆಲ್ಫ್ರೆಡ್ ಮಾರ್ಷಲ್ ಬರೆದ ಗ್ರಂಥ 'ಅರ್ಥಶಾಸ್ತ್ರದ ತತ್ವಗಳು' ಪ್ರಕಟವಾಗಿದ್ದು 1890ರಲ್ಲಿ. ಸಾಮಾನ್ಯ ಜನರಿಗಾಗಿ ಬರೆದ ಪುಸ್ತಕ ಅದು. ಬೇಡಿಕೆ, ಪೂರೈಕೆ, ಬೇಡಿಕೆ ಬೆಲೆ, ಪೂರೈಕೆ ಬೆಲೆ, ಗ್ರಾಹಕನ ಮಿಗತೆ, ಉತ್ಪಾದಕನ ಮಿಗತೆ, ಸಾಮಾನ್ಯ ಬೆಲೆ-ಹೀಗೆ ಅನೇಕ ಪರಿಕಲ್ಪನೆಗಳನ್ನು ಸಾಮಾನ್ಯ ಓದುಗರಿಗೆ ತಿಳಿಯುವ ರೀತಿಯಲ್ಲಿ ಮಾರ್ಷಲ್ ವಿವರಿಸಿದ್ದಾರೆ. ಸುಲಭವಾಗಿ ಗೋಚರಿಸಬಲ್ಲ ಉದಾಹರಣೆಗಳು ಪರಿಕಲ್ಪನೆಗಳಿಗೆ ಆಧಾರವಾಗಿದ್ದು ಅವು ಸುಂದರ ಪ್ರಭಾವಳಿಗಳಂತಿವೆ. ಗಣಿತ ಶಾಸ್ತ್ರದಲ್ಲಿ ಪರಿಣತಿ ಹೊಂದಿದ್ದರೂ ಅವರು ಗಣಿತ ಆಧಾರಿತ ವಿವರಣೆಗಳನ್ನು ತಮ್ಮ ಪುಸ್ತಕದ ಪ್ರಮುಖ ಭಾಗದಲ್ಲಿ ನೀಡದೆ ಕೊನೆಗೆ ಅನುಬಂಧದಲ್ಲಿಟ್ಟಿದ್ದಾರೆ. ಬೇಕಾದ ರೇಖಾ ಚಿತ್ರಗಳನ್ನು (ಆಕೃತಿಗಳನ್ನು)

PAGE DONATED BY : SHRI ROKESH HEGDE & FAMILY, DAHISAR

ಪುಸ್ತಕದ ಪ್ರಮುಖ ಭಾಗದಲ್ಲಿ ತೋರಿಸದೆ ಅಡಿ ಟಿಪ್ಪಣಿಗಳಲ್ಲಿ ಇಟ್ಟದ್ದು ಕೂಡ ತರಗತಿಗಳಲ್ಲಿ ಕುಳಿತು ಕಲಿಯದ  ಓದುಗರ ಅನುಕೂಲಕ್ಕಾಗಿ.

ವರ್ಷ ಕಳೆದಂತೆ ಇಂಗ್ಲೀಷ್ ಬಲ್ಲವರೇ ಅರ್ಥಶಾಸ್ತ್ರದ ಪಾರಿಭಾಷಿಕ ಪದಗಳನ್ನು ತಿಳಿಯುವುದು ಬಿಗಿಯಾಗುತ್ತಿರುವಾಗ ಕನ್ನಡ ಭಾಷೆ ಮಾತ್ರ ಬಲ್ಲ ಕನ್ನಡಿಗರು ತಿಳಿಯುವುದು ಕಷ್ಟವೆಂದು ಬೇರೆ ಹೇಳಬೇಕಿಲ್ಲ. ಹೀಗಾಗಿ ಸಾಮಾನ್ಯ ಓದುಗರಿಗೆ ಆರ್ಥಿಕ ಸಂಗತಿಗಳನ್ನು, ಸಮಸ್ಯೆಗಳನ್ನು ಮತ್ತು ಸತ್ಯಗಳನ್ನು ತಿಳಿಸುವ ದೊಡ್ಡ ಅಭಿಯಾನ ಪ್ರಾರಂಭವಾಗಬೇಕು. ಈ ದಿಶೆಯಲ್ಲಿ ವಿವಿಧ ಮಾಧ್ಯಮಗಳು ಸಮಾಜದ ಹಿತದೃಷ್ಟಿಯಿಂದ ವಿಶೇಷ ಪ್ರಯತ್ನ ಮಾಡಬೇಕಾಗಿದೆ.

ಬೆಲೆಯೇರಿಕೆಯಂತಹ ಸಮಸ್ಯೆಗಳು ತೀವ್ರ ಸ್ವರೂಪ ಪಡೆದಾಗ ಅವುಗಳಿಗೆ  ಪರಿಹಾರ ಕಾಣುವ ದೃಷ್ಟಿಯಿಂದ ಜೀವನ ಕ್ರಮಗಳನ್ನು ಸೂಚಿಸುವ ಕೆಲಸವನ್ನು ಟೀವಿ ವಾಹಿನಿಗಳು ಮಾಡಬಹುದು. ಕೆಲವು ಪರಿಕಲ್ಪನೆಗಳು (ವಿತ್ತೀಯ ಕೊರತೆ, ಚಾಲ್ತಿ ಕೊರತೆ, ಆದಾಯ ಕೊರತೆ, ಇತ್ಯಾದಿ) ಪ್ರತಿವರ್ಷ ಬಜೆಟ್ ಸೀಸನ್ ಬಂದಾಗ ಮಹತ್ವ ಪಡೆದುಕೊಳ್ಳುತ್ತವೆ. ಸಮಯಕ್ಕೆ ಸರಿಯಾಗಿ  ಇವುಗಳನ್ನು ಸಾಮಾನ್ಯರಿಗೆ ತಿಳಿಸುವ ಕಾರ್ಯ ಟೀವಿ ವಾಹಿನಿ-ಪತ್ರಿಕೆ ಗಳಿಂದಾಗಬೇಕು.

ರಾಜ್ಯ ಸರಕಾರ ಪ್ರತಿವರ್ಷ ಆರ್ಥಿಕ ಸಮೀಕ್ಷೆ ಪ್ರಕಟಿಸುತ್ತದೆ. ದುರ್ದೈವದಿಂದ ಇದು ಇಂಗ್ಲೀಷ್ ಆವೃತ್ತಿಯ ಶಬ್ದಶ: ಅನುವಾದವಾಗಿರುವುದರಿಂದ ಸಾಮಾನ್ಯ ಕನ್ನಡಿಗರಿಗೆ ಈ ಸಮೀಕ್ಷೆ ತಿಳಿಯುವುದೇ ಕಷ್ಟ. ಸಮೀಕ್ಷೆಯ ಅನೇಕ ಪ್ರತಿಗಳಿಗೆ ಬೆಂಗಳೂರು ಬಿಡುವ ಭಾಗ್ಯವೇ ಬರುವುದಿಲ್ಲ. ವಿ.ವಿ.ಗಳ ಮತ್ತು ಕಾಲೇಜುಗಳ ಗ್ರಂಥಾಲಯಗಳನ್ನು ಕೂಡ ಅವು ತಲುಪುವುದಿಲ್ಲ. ಸರಕಾರದ ಎಷ್ಟೋ ಯೋಜನೆಗಳ ಬಗೆಗೆ ಜನಸಾಮಾನ್ಯರಿಗೆ ಸರಿಯಾದ ಮಾಹಿತಿಯೇ ಇರುವುದಿಲ್ಲ. ಬೇಕಾದ ಮಾಹಿತಿಯನ್ನು ಸರಳ ಕನ್ನಡದಲ್ಲಿ ಚಿಕ್ಕ ಪುಸ್ತಕಗಳ ರೂಪದಲ್ಲಿ ಪ್ರಕಟಿಸಿ ಆರ್ಥಿಕ ಯೋಜನೆ, ಕಾರ್ಯಕ್ರಮಗಳನ್ನು ಸಾಮಾನ್ಯ ಜನರಿಗೆ ತಲುಪಿಸುವ ಕೆಲಸ ಗ್ರಾಮ ಪಂಚಾಯತ್-ನಗರ ಸಭೆಗಳಿಂದಾದರೆ ಅನುಕೂಲ.

ಕೃಪೆ : ವಿಸ್ತಾರನ್ಯೂಸ್. ಕೋಮ್ ಜೂನ್ 15, 2023

## ಚುಟುಕು

### ತಿನ್ನುತ್ತಾರೆ

ವಾಸ್ತವ
ಕಚೇರಿಯಲ್ಲಿ
ನಡೆಯುವುದೇ ಹೀಗೆ
ಕೆಲವರು
ಹಣ ತಿನ್ನುತ್ತಾರೆ
ಇನ್ನು ಕೆಲವರು
ತಲೆ ತಿನ್ನುತ್ತಾರೆ!

**– ಲಕ್ಷ್ಮಣ ಶಾನಭಾಗ, ಕಡತೋಕಾ**

## ಮೌಲ್ಯ

**– ಶಾರದಾ ಅಂಚನ್**

ಮನುಜ ಬದುಕಬೇಕು
ಸತ್ತ ನಂತರವೂ ಹೆಸರು ಉಳಿಯಬೇಕು ..
ಜನ ನಮ್ಮ ಬದುಕ ಅನುಸರಿಸಬೇಕು
ಬಾಳಿದ ರೀತಿಯ ನೆನಪಿಸಬೇಕು...
ಇದುವೇ ಜೀವನದ ಮೌಲ್ಯ
ಎಲ್ಲಿ ಮನ ನಿರ್ಭಯದಿ
ತಲೆಯೆತ್ತಿ ನಿಲ್ಲುವುದೋ
ಎಲ್ಲಿ ಜ್ಞಾನವು ಮುಕ್ತವಾಗಿರುವುದೋ
ಎಲ್ಲಿ ಈ ಲೋಕ
ಸಂಕುಚಿತ, ಮನೆ, ಗೋಡೆ
ಸುತ್ತುಗಳಿಂದ ಚೂರುಚೂರಾಗಿ
ಒಡೆದಿಲ್ಲವೋ
ಎಲ್ಲಿ ಮಾತುಗಳು ಸತ್ಯದಾಳದಿಂದಲೇ
ಚಿಮ್ಮುವುದೋ
ಎಲ್ಲಿ ದಣಿವರಿಯದ ಅನ್ವೇಷಣೆ
ತನ್ನ ತೋಳುಗಳ ಪರಿಪೂರ್ಣತೆಯ ಕಡೆಗೆ
ಚಾಚಿರುವುದೋ
ಎಲ್ಲಿ ವೈಚಾರಿಕತೆಯ
ನಿರ್ಮಲ ಸಲಿಲ ತರಂಗಿಣಿ
ಅರ್ಥಹೀನ ವಿಚಾರಗಳ
ಶುಷ್ಕ ಮರುಭೂಮಿಯಲಿ
ದಾರಿ ತಪ್ಪಿಲ್ಲವೋ
ಎಲ್ಲಿ ನನ್ನ ಮನಸ್ಸು ನಿರಂತರವೂ
ವಿಸ್ತಾರಗೊಳ್ಳುವ ಮಾತು ಕೃತಿಗಳ ಕಡೆಗೆ
ನಿನ್ನ ಮಾರ್ಗದರ್ಶನದಲ್ಲಿ
ಮುನ್ನಡೆಯುವುದೋ
ಅಂತಹ ಸ್ವಾತಂತ್ರ್ಯದ ಸ್ವರ್ಗಕ್ಕೆ
ಓ ! ನನ್ನ ತಂದೆಯೇ
ಈ ನಾಡು ಎಚ್ಚರಗೊಳ್ಳಲಿ
ಮಾನವೀಯ ಮೌಲ್ಯಗಳ ಸಾರವಿದು
ಎಲ್ಲೆಲ್ಲೂ ಪಸರಿಸಲಿ !

*(ಸ್ವಾಮಿ ಸುವ್ರತಾನಂದ ಸರಸ್ವತಿ ಅವರ ಮೌಲ್ಯಗಳು ಕೃತಿಯ ಆಧಾರ)*

★★★

*PAGE DONATED BY :* ***SHRI ANANT GANESH BHAT, BANDRA & FAMILY***

# Thinking of Risk before Return

✍ **Vinod N. Bhat**

**Asset Allocation**

'Can we order pizza for dinner tonight?' Prerna, Siddharth's teenage daughter, asked tentatively on a Sunday evening.

'Didn't you just go out with your friends yesterday to watch Barbie and eat fast food?' Siddharth pointed out.

'Ya, that's true Dad. But I am in the mood to eat some junk food today too.'

'Are you planning to run a marathon or something? In that case, it makes sense to do this kind of carb loading.'

'What are you talking about?'

'You know that junk food like burgers, pizzas, french fries, potato chips, and sugary drinks are highly processed and are generally high in calories, refined carbs and unhealthy fats. They're also low in nutrients like proteins and fiber.'

'Yes, I know that, Dad!'

'And what we really need is a balanced meal which gives us the right mix of proteins, carbs, fats, fiber, and vitamins.'

'I know that too, Dad. And I also know what you are going to tell me next.'

'And what is that?'

'That home-cooked food is the best option to go with.'

'You always read my mind! But that's absolutely true. Our basic meal of salad, roti, sabzi, rice, dal, and raita is the best balanced meal we can have so that our body gets all the necessary ingredients.'

'OK, Dad,' Prerna went back to her studying without arguing further. After all, she knew her father was right.

The next day, Siddharth was in his office when Ashwin, a new client, walked in to get his advice on preparing his financial plan.

'Let's start by doing a diagnostic analysis of your existing portfolio,' Siddharth suggested.

'Sure, here's my current portfolio,' Ashwin replied as he handed him some papers.

'Well, this is quite easy. You have most of your savings in FDs, with a small allocation in gold and some stocks. Mind you, I am not counting the flat you own which you are living in.'

'Yes, I haven't really applied my mind in this regard till now. That's why I have come to you for help. My family responsibilities are increasing. And I need to build a sufficient corpus for my children's education as well as my own retirement.'

'I understand completely. But you need to understand a basic concept first too. And that is Asset Allocation.'

'What is that?'

'Just like we need a balanced meal to provide our body with all the necessary nutrients in order to stay healthy, our portfolio needs to have a balanced asset allocation to provide stable risk-adjusted returns so that we can build a good corpus.'



'That's a good analogy. I get what you are saying. But what does that mean for my portfolio.'

'You have quite a skewed allocation currently. Most of your savings are in FDs which is fine if you don't want to lose your savings but they are not going to give you sufficient returns to build the kind of corpus you need. That's like eating just salads to be healthy. It's not going to give you sufficient energy to get through the day.'

'But I also own some stocks.'

'Yes, but you just seem to have made a haphazard collection. The quality of stocks in your portfolio is not that great. How did you choose them?'

'You are right. I just bought them based on tips I got from some friends and from what I read in the papers or saw on the business news channels.'

'Well, that's like eating different sweets for dessert because your friends recommended them or you saw ads on TV. You'll just end up with diabetes.'

'I get it. So, what do you suggest.'

'Just think of putting together your portfolio in the form of a balanced meal. You should have a mix of different asset classes in the form of a) Equity Mutual Funds along with some stocks if you wish, b) Fixed Income Mutual Funds along with your FDs and PPF, c) Gold ETFs or Sovereign Gold Bonds, and d) Real Estate and Infrastructure in the form of REITs/InvITs.'

'What is the advantage of having such a portfolio?'

'The biggest advantage is that each of these asset classes behaves differently as the economy goes through different phases of the business cycle. That's what we call negative correlation. For example, if Equities or the stock market is not doing well, then Fixed Income or Gold may do well. Or it may be the other way around.

'So, overall, my portfolio will have the necessary ingredients to give a stable risk-adjusted return over time even as market conditions keep changing.'

'You got that right. It's just like having a balanced meal.'

'That's great. I understood this part. So, what kind of asset allocation should I have in place?' Ashwin asked Siddharth.

'Let's discuss that next,' Siddharth replied. 'But's let have tea and some snacks first.'

*(to be continued)*

[Vinod Bhat is the author of the book **'The Financial Independence Marathon'** which has been recently published by Penguin India. Readers can refer to the book for many such golden nuggets. The book is available on Amazon.in at : https://www.amazon.in/Financial-Independence-Marathon-Unlock-Power/dp/0143459988]

*PAGE DONATED BY : **SHRI V. G. BHAT, NIGDI***

# ನಿರುತ್ತರ...!

✍ ಮೇಧಿನಿ ಹೆಗಡೆ



ಭಾನುವಾರ ಆಗಿದ್ರಿಂದ platform ಅಷ್ಟೆಲ್ಲಾ rush ಇರ್ಲೇ. ಹಂಗೇ ನೋಡ್ತಾ ನಿಂತಿದ್ದಿ, ಸುಮಾರು 20 ನಿಮಿಷ ಕಳೆದಿತ್ತು. ನಾನು local train stationಗೆ ಬಂದು ಕೂತಿದ್ದೆ. ಅಷ್ಟರಲ್ಲೇ ಒಂದ್ಹತ್ತು ಟ್ರೈನ್ ಪಾಸ್ ಆಗಿರಲಕ್ಕು. ಒಂದೊಂದು ಟ್ರೈನ್ ಬಂದು ಹೋದಾಗಲೂ ಒಂದೊಂದೇ ಹಳೆ ನೆನಪುಗಳೂ ಅದರೊಟ್ಟಿಗೆ ಬಂದು ಹೋಗುತ್ತಿದ್ದವು. ಒಂದಿಲ್ಲೊಂದು ಗಡಿಬಿಡಿ ಹೊತ್ತ ಜನರ ಮುಖಭಂಗಿಗಳು ಸಾವಿರ ಕಥೆಗಳನ್ನ ಹೇಳುತಿದ್ದವು. ಮುಂಚೆಯೆಲ್ಲಾ ಅಂದರೆ ಕೊರೋನಾ ಟೈಮ್‌ಗಿಂತ ಮುಂಚೆ ಈ ಬೆಳಗ್ಗಿನ ಟೈಂನಲ್ಲಿ ಅಸಾಧ್ಯ ಅನ್ನುವಷ್ಟು rush ಇರ್ತಿತ್ತು. ಈಗ ಸುಮಾರಷ್ಟೇ ಕಮ್ಮಿ ಹಂಗ್ನೋಡಿದ್ರೆ. ಗಂಟೆ 10.48 ತೋರುಸ್ತಿತ್ತು. ದೂರದಿಂದ ಟ್ರೈನ್ ಬರೋದು ಕಾಣುಸ್ತಾ ಇತ್ತು, ಇದಕ್ಕೆ ಹತ್ತಲೇ ಬೇಕು ಅಂತ ನಿರ್ಧರಿಸಿ ಹತ್ತೇ ಬಿಟ್ಟೆ.

ನನ್ನ ಮುಂಬೈ ಜೀವನದ ಶುರುವಿನಲ್ಲಿ ಅಂದ್ರೆ ಈಗ 45 ವರ್ಷದಿಂದ ಇವತ್ತಿನವರೆಗೆ ಅದೆಷ್ಟೋ ವಿಷಯಗಳು ಬದಲಾಯ್ದು. ಯಾವ್ದೋ ಹಳ್ಳಿಯಲ್ಲಿ ಹುಟ್ಟಿ ಸರಿಯಾದ ಶಿಕ್ಷಣ ಇಲ್ದೆ ಮುಂದೆಂತು ಅಂತ ಯೋಚ್ನೆ ಮಾಡ ಹೊತ್ತಿಗೆ ಬದುಕು ಮುಂಬೈ ಕಡೆಗೆ ಹೊರಟು ನಿಂತಿತ್ತು. ಸರ್ವರನ್ನ ಸ್ವತಂತ್ರವಾಗಿ ಸ್ವೀಕರಿಸೋ ಮುಂಬೈ ನನ್ನನ್ನೂ ಸಹ ತನ್ನದಾಗಿಸಿಕೊಂಡಿತ್ತು. ಬದುಕಿಗೆ ನೆಲೆ ಕೊಟ್ಟಿತ್ತು. ಶಿಕ್ಷಣ ಕೊಟ್ಟಿತ್ತು. ನನ್ನದಾದ ಬದುಕನ್ನ ನಿರ್ಮಿಸಿ ಕೊಟ್ಟಿತ್ತು. ಇದೇ local train ನನ್ನ ಅದೆಷ್ಟೋ ಏಳು-ಬೀಳುಗಳಿಗೆ ಸಾಕ್ಷಿಯಾಗಿವೆ. ಹಂಗಂತ ನಂಗೆ ಮುಂಬೈ ಜೀವನ ಯಾವತ್ತೂ ಬೇಡವೆನಿಸಲ್ಲೆ, ಹಂಗೇ ಮುಂಬೈಗೆ ಕೂಡ ಅಂತ ನಾನ್ ಅಂದುಕೊಂಡಿದ್ದಿ.

LIC ಯ 40 ವರ್ಷದ ಸುದೀರ್ಘ ಕೆಲಸದಿಂದ ನಿವೃತ್ತಿಗೊಂಡ ಮೇಲೆ ಜೀವನ ತುಂಬಾ ಆರಾಮದಾಯಕವಾಗಿದ್ದು. ಮನೇಲಿ ಮಗ-ಸೊಸೆ ಅವಳಿ ಮೊಮ್ಮಕ್ಕಳೊಂದಿಗೆ ನಾನು ಮತ್ತೆ ನನ್ನ ಯಜಮಾನರ ಕಾಲಮಾನ ಸುಂದರವಾಗೇ ಸವಿತಿದ್ದು.

ಒಂದು ವಾರದ ಹಿಂದೆ ನಂಗು ನನ್ನ ಮಗಂಗೂ ವಾದ ನೆಡೆದಿತ್ತು. ಅವನದ್ದು ಒಂದೇ ರಗಳೆ... 'ಅಮ್ಮಾ ನೀನು ಹುಷಾರಾಗಿರಕ್ಕು, ಎಲ್ಲಾ ವಿಷಯದಲ್ಲೂ ಸ್ವಲ್ಪ ಮೊದಲಿಗಿಂತ ಜಾಸ್ತಿ ಗಮನಕೊಡು, ಇತ್ತೀಚಿಗೆ ನಿಂಗೆ ಮರೆವು ಶುರು ಆಯ್ದು ಅನುಸ್ತಿದ್ದು'.

ಎಲಾ ಇವನ! ಒಂದನೇ ತರಗತಿ ಪುಸ್ತಕ ಪಾಠದಿಂದ ಹಿಡಿದು ಇವನ tax workings ತನಕ ನೆನಪಿಟ್ಟುಕೊಳ್ಳೋದನ್ನ ಹೇಳಿಕೊಟ್ಟ ನಂಗೇ ಮರೆವು ಅಂತಿದ್ನಲ ಅಂತ ಸಿಕ್ಕಾಪಟ್ಟೆ ಸಿಟ್ಟು ಬಂದಿತ್ತು. ಇಲ್ಲವೇ ಇಲ್ಲ ಎಂಬ ನನ್ನ ವಾದಕ್ಕೆ ಇಂಬು ಕೊಟ್ಟೋರೇ ಇರ್ಲೇ ಮನೇಲಿ.

ಹಿಂಗೇ ಸುಮಾರಷ್ಟು ವಿಚಾರಗಳ ಸಂಘರ್ಷ ನೆಡಿತಾ ಇರಕಾದ್ರೆ VT station ಬಂತು. ಟ್ರೈನ್ ಇಳ್ದು Station ನಿಂದ ಹೊರ ಬಂದಿ. ವಾವ್! ಈ VT station ಕಟ್ಟಿದವ ಈಗ ಇದ್ದಿದ್ರೆ ನಾನೇ ಹೋಗಿ ಸನ್ಮಾನ ಮಾಡ್ತಿದ್ನೇನ, ಅಷ್ಟು ಚಂದ. ಯಾವ ಅರಮನೆಗೂ ಕಮ್ಮಿ ಇಲ್ಲದ ಸೊಬಗು.

Marine Drive ಕಡೆಗೆ ಅನಾಯಾಸವಾಗಿ ಕಾಲುಗಳು ಸೆಳೆದಿದ್ದವು. ಈ ದಾರಿಯ ಪ್ರತೀ ಇಂಚಿಂಚೂ ನೆನಪಿದ್ದು ನಂಗೆ. ಬಿಸಿಲು ಬರೋಬ್ಬರಿ ಇದ್ದಿದ್ರೂ Marine Drive ಸುಡ್ತಾ ಇರ್ಲೇ. ಎಂತಕಂದ್ರೆ ನೆನಪುಗಳು ಒಳ ಮನಸ್ಸನ್ನ ತಂಪಾಗಿಸುತಿದ್ದವು. ಗಂಟೆ 1.30 ಆಗಿದ್ರಿಂದ ಹೊಟ್ಟೆ ತಾಳಹಾಕಲು ಶುರುಮಾಡಿತ್ತು.

ನಮ್ಮ favorite ಪೂರ್ಣಿಮಾ ರೆಸ್ಟೋರೆಂಟ್‌ಗೆ ಹೋದಿ. ಚೋಲೆ- ಬಟೂರೆ ತಿಂದವಳಿಗೆ ಅನ್ನಿಸಿದ್ದು, ಅರೆ! 45 ವರ್ಷದಲ್ಲಿ ಬದಲಾಗದೇ ಇರದು ಅಂದ್ರೆ ಇಲ್ಲಿಯ ಚೋಲೆ ರುಚಿನೇ ಇರಕ್ಕು ಅಂತ. VT ಸೈಡ್‌ನ ಪ್ರತೀ ರಸ್ತೆ, ಪ್ರತೀ ಕಟ್ಟಡ ಎಲ್ಲವೂ ಚಂದ ಮತ್ತೆ ಆಪ್ತ ಅನ್ನುಸ್ತು ನಂಗೆ.

ಪೂರ್ಣಿಮಾದಿಂದ ಹೊರಟು ಅಲ್ಲೆಲ್ಲ ಓಡಾಡೋ ಹೊತ್ತಿಗೆ ಸಂಜೆ 4.30 ಆಗಿತ್ತು. ಮತ್ತದೇ VT stationಗೆ ಬಂದು local train ಹಿಡಿದು ಕುರ್ಲ ತಲುಪಿ ಅಲ್ಲಿಂದ ಮನೆಗೆ ನೆಡೆದುಕೊಂಡು ಹೋಗ್ತಾ ಯೋಚಿಸಿದ್ದಿ, ಮಗಂಗೆ ಹೇಳಕ್ಕು, 'ನಂಗೆ ಮರೆವು ಅಂತಿದ್ಯಲ, ನೋಡು ಇವತ್ತು ಎಷ್ಟುಕಡೆ ಒಬ್ಬೆ ಹೋಗಿ ಬಂದಿ ಅಂತ. ಯಾವದನ್ನೂ ಮರೆಯಲ್ಲೇ ನಾನು. ನನ್ನ ನೆನಪಿನ ಶಕ್ತಿ ಸರೀನೇ ಇದ್ದು ಗೊತ್ತಾತಾ' ಅಂತ.

ಮನೆ ಹೊಕ್ಕವಳೇ ಸೊಸೆ ಹತ್ರ ಚಹಾಕ್ಕೆ ಹೇಳಿ, ಟಿವಿ ನೋಡ್ತಾ ಇದ್ದ ಮಗನತ್ರ ಹೋಗಿ ಕುಳಿತು ಇನ್ನೇನು ಬಾಯಿ ತೆರಿಯಕ್ಕು ಅನ್ನಷ್ಟ್ರಲ್ಲೇ ಅವಕೇಳ್ದ.

'ಅಮ್ಮಾ, ಗಜಾನನ ಅಂಕಲ್ಮನೇಲಿ ಪೂಜೆ ಹೇಳಿ ಹೋಗಿದ್ಯಲೇ ಚೆನ್ನಾಗಾತ? ನೀ ಹೋಗಿದ್ದಕ್ಕೆ ಎಲ್ಲರಿಗು ಫುಲ್ಖುಷಿ ಆಗಿಕ್ಕು, ನಿನ್ನಹಳೇ ಫ್ರೆಂಡ್ಸ್ ಎಲ್ಲಾ ಸಿಕ್ಕಿದ್ವಾ'? ಅಂದ..

ಎಂತ ಹೇಳಕ್ಕು ಅಂತಾನೆ ಗೊತ್ತಾಗ್ದೇ ನಿರುತ್ತರಳಾಗಿ ಹಂಗೇ ಸುಮ್ನೆ ಕುಳಿತೇ ಇದಿದ್ದಿ !! ❍

UIL

UGRU INDUSTRIES

With Best Compliments from

UGRU INDUSTRIES
Manufacturers of Speciality food products

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

ADVT.

PAGE DONATED BY : SMT. KALA BHAGWAT, KHARGAR IN MEMORY OF MOTHER LATE SMT. GOURI BHAT

# ಮಾಸ ಭವಿಷ್ಯ

✍ ಶ್ರೀಪತಿ ಭಟ್

**ಮೇಷ :** ವಿದೇಶಿ ಗೆಳೆಯರು ಅಥವಾ ಪಾಲುದಾರರ ಸಹವಾಸದಿಂದ ವ್ಯವಹಾರದಲ್ಲಿ ಉತ್ತಮ ಬದಲಾವಣೆಯನ್ನು ಕಾಣುವಿರಿ. ಅನವಶ್ಯಕವಾಗಿ ಇತರರ ಬಗ್ಗೆ ಋಣಾತ್ಮಕವಾಗಿ ಚಿಂತಿಸುವುದು ನಿಮಗೆ ಒಳಿತಲ್ಲ. ಹಣದ ಹರಿವಿದ್ದರೂ ಖರ್ಚನ್ನು ಮಾಡುವ ಬಗ್ಗೆ ಆಲೋಚಿಸಿರಿ. ಸಂಗೀತ ಕಲಿಯುತ್ತಿರುವವರಿಗೆ ಸಾಕಷ್ಟು ಯಶಸ್ಸು ಇರುತ್ತದೆ. ಲೆಕ್ಕ ಪರಿಶೋಧಕರಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. (ಅದೃಷ್ಟ ಸಂಖ್ಯೆ : 1)

**ವೃಷಭ :** ಯಾವುದೇ ರೀತಿಯ ವಾದ ವಿವಾದಗಳು ನಿಮ್ಮ ಕೆಲಸ ಕಾರ್ಯಕ್ಕೆ ಅಡ್ಡಿಪಡಿಸದಂತೆ ಎಚ್ಚರ ವಹಿಸಿ. ಸಮಾಜದಲ್ಲಿನ ನಿಮ್ಮ ಮುಂದಾಳತ್ವವನ್ನು ಜನರು ಗುರುತಿಸಿ ನಿಮಗೆ ಗೌರವ ಕೊಡುತ್ತಾರೆ. ಹೊಸ ಮನೆಯನ್ನು ಕೊಳ್ಳುವ ಬಗ್ಗೆ ದಲ್ಲಾಳಿಯ ಜೊತೆ ಮಾತುಕತೆ ಮಾಡಬಹುದು. ಕಚೇರಿಯಲ್ಲಿ ಸಹೋದ್ಯೋಗಿಗಳ ಜೊತೆ ಇದ್ದ ಮನಸ್ತಾಪಗಳು ದೂರವಾಗಿ ವಾತಾವರಣ ತಿಳಿಯಾಗುತ್ತದೆ. (ಅದೃಷ್ಟ ಸಂಖ್ಯೆ : 6)

**ಮಿಥುನ :** ವಿಪರೀತ ಸ್ವಾಭಿಮಾನ ನಿಮ್ಮನ್ನು ಆವರಿಸುತ್ತದೆ. ಇದರಿಂದ ನಿಮ್ಮ ಮಾತಿನಲ್ಲಿಯೂ ವ್ಯತ್ಯಾಸವಾಗಬಹುದು. ಹೆಚ್ಚು ಅಲಂಕಾರಿಕವಾಗಿ ಕಾಣಿಸಿಕೊಳ್ಳಲು ಪ್ರಯತ್ನಪಡುವಿರಿ. ಈ ವಾರ ಸಂಸಾರದಲ್ಲಿ ಸುಖವಿರುತ್ತದೆ. ಸಂಸಾರದ ಏಳಿಗೆಗಾಗಿ ಎಲ್ಲರೂ ಕೈಜೋಡಿಸುವರು. ವಿದ್ಯಾರ್ಥಿಗಳಿಗೆ ಸ್ವಲ್ಪ ಮಟ್ಟಿನ ಹಿನ್ನಡೆಯಾಗಬಹುದು. ಗುಪ್ತ ರೋಗಗಳಿರುವವರು ಹೆಚ್ಚು ಎಚ್ಚರ ವಹಿಸಿ. (ಅದೃಷ್ಟ ಸಂಖ್ಯೆ : 3)

**ಕರ್ಕಾಟಕ :** ಈ ವಾರ ಬಹಳ ತಾಳ್ಮೆಯಿಂದ ಕಾಯುತ್ತಿದ್ದ ಕೆಲಸಗಳು ಈಗ ಕೈಗೂಡಬಹುದು. ಅಭಿವೃದ್ಧಿಯ ಯಾವುದೇ ಅವಕಾಶಗಳನ್ನು ಕೈಚೆಲ್ಲಬೇಡಿ. ಕುಟುಂಬ ನಿರ್ವಹಣೆಯಲ್ಲಿ ಗಟ್ಟಿತನ ತೋರಿಸಿ. ಇಲ್ಲವಾದಲ್ಲಿ ನಿಮ್ಮ ಸ್ಥಾನ ಪಲ್ಲಟವಾಗುತ್ತದೆ. ಕೃಷಿಯಿಂದ ಹೆಚ್ಚು ಆದಾಯವಿರುತ್ತದೆ. ಹಾಗೂ ಕೃಷಿಕರಿಗೆ ಬೇಕಾದ ಸೌಕರ್ಯಗಳು ದೊರೆಯುತ್ತದೆ. ಬುದ್ಧಿವಂತಿಕೆಯಿಂದ ನಿಮ್ಮ ಕೆಲಸ ಕಾರ್ಯಗಳನ್ನು ಸಾಧಿಸಿಕೊಳ್ಳುವಿರಿ. (ಅದೃಷ್ಟ ಸಂಖ್ಯೆ : 9)

**ಸಿಂಹ :** ಜವಾಬ್ದಾರಿಯುತ ಸ್ಥಾನವನ್ನು ಸರಿಯಾಗಿ ನಿರ್ವಹಿಸಿರಿ. ನೆಂಟರ ವಿಶ್ವಾಸ ಗಳಿಸುವುದು ನಿಮಗೆ ಬಹಳ ಮುಖ್ಯ. ಕೃಷಿ ವರ್ಗದವರ ಕೆಲಸ ಕಾರ್ಯಗಳು ಸರಾಗವಾಗಿ ಆಗುತ್ತದೆ. ಹಣಕಾಸಿನ ವ್ಯಾಮೋಹ ಹೆಚ್ಚಾಗಿ ಹಣ ಕಳೆದುಕೊಳ್ಳುವ ಸಾಧ್ಯತೆಗಳಿವೆ. ಕುಟುಂಬದ ಕಡೆಗೆ ಹೆಚ್ಚು ಗಮನ ಕೊಡುವುದು ಒಳ್ಳೆಯದು. ಅಧ್ಯಾತ್ಮಿಕ ವಿಚಾರವನ್ನು ಕಲಿಯುವ ಆಸಕ್ತಿ ಮೂಡುತ್ತದೆ. (ಅದೃಷ್ಟ ಸಂಖ್ಯೆ : 2)

**ಕನ್ಯಾ :** ಕೆಲಸ ಮಾಡುವ ಸಾಮರ್ಥ್ಯವಿದ್ದರೂ ಅವಕಾಶಗಳನ್ನು ಕೈಚೆಲ್ಲಿ ಪರದಾಡದಿರಿ. ಈ ವಾರ ಹಣಕಾಸಿನ ಲೆಕ್ಕಾಚಾರವನ್ನು ನೋಡಿ ಕೊಳ್ಳುವವರು ಬಹಳ ಎಚ್ಚರಿಕೆಯಿಂದ ವ್ಯವಹಾರ ಮಾಡಿ. ಪ್ರೀತಿ ಪಾತ್ರರಿಗೆ ನಿಮ್ಮ ಭಾವನೆಯನ್ನು ವ್ಯಕ್ತಪಡಿಸಲು ಅವಕಾಶ ಈಗ ದೊರೆಯುತ್ತದೆ. ತಾಯಿ ಮಕ್ಕಳ ನಡುವೆ ಕಾವೇರಿದ ಮಾತುಗಳು ಆಗಬಹುದು. ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡುವ ಮನಸ್ಸು ಕಡಿಮೆಯಾಗಬಹುದು. (ಅದೃಷ್ಟ ಸಂಖ್ಯೆ : 7)



**ತುಲಾ :** ಸಂಗಾತಿಗೆ ನೀವು ತೋರಿಸಿದ ಪ್ರೀತಿ ಕಾಳಜಿಯಿಂದ ಅವರ ಮನೆಯ ಕಡೆಯವರಿಗೆ ನಿಮ್ಮ ಮೇಲೆ ಗೌರವ ಹೆಚ್ಚುತ್ತದೆ. ದುರಾಭ್ಯಾಸ ಗಳನ್ನು ಕಲಿಸುವ ಸ್ನೇಹಿತರು ದೊರೆಯುವ ಸಂದರ್ಭವಿದೆ. ಎಚ್ಚರ ವಹಿಸಿ. ನಿಲುಕದ ವಸ್ತುವಿಗಾಗಲಿ ಒದ್ದಾಡದಿರಿ. ಸ್ನೇಹಿತರು ಮತ್ತು ಬಂಧುಗಳ ನಡುವಿನ ವಿಶ್ವಾಸ ಕಡಿಮೆಯಾಗುವ ಸಾಧ್ಯತೆ ಇದೆ. (ಅದೃಷ್ಟ ಸಂಖ್ಯೆ 4)

**ವೃಶ್ಚಿಕ :** ವೃತ್ತಿಯಲ್ಲಿ ಶಾಂತ ರೀತಿಯಿಂದ ಇದ್ದು ವ್ಯವಹರಿಸುವುದು ಒಳ್ಳೆಯದು. ಸಾಂಪ್ರದಾಯಿಕ ವಿಚಾರಗಳ ಬಗ್ಗೆ ತಿಳಿದುಕೊಳ್ಳಲು ಹೆಚ್ಚು ಆಸಕ್ತಿ ಈಗ ಮೂಡುತ್ತದೆ. ಸಿಗುವ ಅವಕಾಶಗಳನ್ನು ಬಳಸಿಕೊಂಡು ಉತ್ಸಾಹ ಹೆಚ್ಚಿಸಿಕೊಳ್ಳುವಿರಿ. ಕೃಷಿ ಮಾರುಕಟ್ಟೆಯ ಕಮಿಷನ್ ಏಜೆಂಟ್‌ಗಳಿಗೆ ಹೆಚ್ಚು ಹಣ ಸಿಗುತ್ತದೆ. ಸರಕು ಸಾಗಣೆ ಮಾಡುವವರಿಗೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. (ಅದೃಷ್ಟ ಸಂಖ್ಯೆ : 5)

**ಧನು :** ನಿಮ್ಮ ವಿಚಾರಗಳನ್ನು ಜಾರಿಗೊಳಿಸುವ ಮುಂಚೆ ಮತ್ತೊಮ್ಮೆ ಪರಿಶೀಲಿಸಿ. ದೂರ ಪ್ರವಾಸಗಳಿಂದ ದೇಹಾಲಸ್ಯ ಉಂಟಾಗಬಹುದು. ಉದ್ಯೋಗ ಸ್ಥಳದಲ್ಲಿ ಇದ್ದ ಗೊಂದಲ ನಿವಾರಣೆಯಾಗಿ ಪ್ರಮುಖ ಸ್ಥಾನವೊಂದು ದೊರೆತು ಸಂತಸವಾಗುತ್ತದೆ. ಕಬ್ಬಿಣದ ಅದಿರು ವ್ಯಾಪಾರಿಗಳಿಗೆ ಹೆಚ್ಚಿನ ವ್ಯವಹಾರ ನಡೆಯುತ್ತದೆ. ಕೆಲವು ಬ್ಯಾಂಕ್ ಹಿರಿಯ ಅಧಿಕಾರಿಗಳಿಗೆ ಈಗ ವರ್ಗಾವಣೆಯಾಗುವ ಯೋಗವಿದೆ. (ಅದೃಷ್ಟ ಸಂಖ್ಯೆ : 8)

**ಮಕರ :** ಹಣದ ವ್ಯತ್ಯಾಸಗಳು ಏನೆಂದು ಈಗ ಅರಿವಾಗಲಿದೆ. ಕಳೆದು ಹೋಗಿದ್ದ ವಸ್ತುವೊಂದು ದೊರೆತು ಸಂತಸವಾಗುತ್ತದೆ. ಉದ್ಯಮಿಗಳು ತಮ್ಮ ಕಾರ್ಯತಂತ್ರಗಳನ್ನು ಸರಿಯಾಗಿ ಆಲೋಚಿಸಿ ಜಾರಿಗೊಳಿಸುವುದು ಉತ್ತಮ. ಇದರಿಂದ ಆದಾಯ ಹೆಚ್ಚಾಗುವ ಸಾಧ್ಯತೆ ಇದೆ. ಆಪ್ತ ವರ್ಗದವರೊಡನೆ ನಡೆಸುವ ಮಾತುಕತೆಗಳು ಹೆಚ್ಚು ಫಲಪ್ರದವಾಗುತ್ತವೆ. ಚಿನ್ನ-ಬೆಳ್ಳಿ ವ್ಯಾಪಾರಿಗಳಿಗೆ ಸಾಮಾನ್ಯ ವ್ಯಾಪಾರವಿರುತ್ತದೆ. (ಅದೃಷ್ಟ ಸಂಖ್ಯೆ : 6)

**ಕುಂಭ :** ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವಿಷಯಗಳಲ್ಲಿ ಹೆಚ್ಚು ಆಸಕ್ತಿ ಮೂಡಿ ಉತ್ತಮ ಫಲಿತಾಂಶ ದೊರೆಯುತ್ತದೆ. ಪ್ರೀತಿ ಪ್ರೇಮದ ವಿಷಯದಲ್ಲಿ ಮನಸ್ತಾಪ ಮೂಡಿ ಪ್ರೇಮ ವಿಫಲವಾಗುತ್ತದೆ. ಯುವಕರು ಉದ್ಯೋಗ ಸ್ಥಳದಲ್ಲಿ ಬಹಳ ಎಚ್ಚರಿಕೆಯಿಂದ ಮಾತನಾಡಬೇಕು. ಇಲ್ಲವಾದಲ್ಲಿ ನಿಮ್ಮ ಉದ್ಯೋಗಕ್ಕೆ ಕುತ್ತು ಬರುವ ಸಾಧ್ಯತೆ ಇದೆ. ವಿಶೇಷ ವ್ಯಕ್ತಿಗಳನ್ನು ಭೇಟಿಯಾಗುವ ಅವಕಾಶಗಳಿರುತ್ತವೆ. (ಅದೃಷ್ಟ ಸಂಖ್ಯೆ : 1)

**ಮೀನ :** ಉದ್ಯೋಗ ಬದಲಾವಣೆ ಮಾಡಬೇಕೆನ್ನುವವರಿಗೆ ಇದು ಸಕಾಲ. ಹೆಚ್ಚಿನಗಳಿಗೆ ಬಗ್ಗೆ ಆಲೋಚನೆ ಮಾಡಿ ಉದ್ಯೋಗ ಬದಲಿಸಿ. ಗುತ್ತಿಗೆದಾರರಿಗೆ ಕೆಲಸ ಮಾಡಿದ ಹಳೆ ಬಾಕಿ ಹಣ ಈಗ ಬರುವ ಸಾಧ್ಯತೆ ಇದೆ. ನಿಮ್ಮ ವ್ಯವಹಾರಗಳಲ್ಲಿ ನಿಗೂಢತೆಯನ್ನು ಕಾಪಾಡಿಕೊಳ್ಳುವುದು ಒಳ್ಳೆಯದು. ಕುಟುಂಬದಲ್ಲಿ ಆಸ್ತಿಗೆ ಸಂಬಂಧಿಸಿದ ಸಮಸ್ಯೆಗಳು ಈಗ ಬಗೆಹರಿಯುವ ಲಕ್ಷಣ ಇದೆ. (ಅದೃಷ್ಟ ಸಂಖ್ಯೆ : 3)

*PAGE DONATED BY :* ***SHRI CHIDANANDA BHAGWAT IN MEMORY OF HIS FATHER LATE KRISHNA T. BHAGWAT***

# ಸಂಕ್ಷಿಪ್ತ ಸುದ್ದಿಗಳು

## Geleyara Balaga Get-together

Few Havyaka friends residing in and around Thane, Mulund, Airoli and Kalwa came together 15 years back and taken the initiative of organizing get together of Havyaka members every year on the occasion of international friendship day. This year was the 13th one, known as Havyaka Geleyara Balagada day was organized at Mulund on 6th August and it was attended by more than 300 havyaka members residing across Mumbai. The purpose of this get together was to gel and bind all Havyaka members and rejoice the memories, encourage internal talents and promote Havyaka culture.

This year the memories of the members went back down the lane to Havyakara Maduve and the same was set as the theme for the get together. The thought of maduve, itself created a zeal among members to recreate the maduve scene and display our culture to the young upcoming members of our community. The venue was decorated like maduve mandap with the balekamba and rangoli at the entrance.

The brand day began right at 9.30AM with mouth smacking breakfast of Kancipuram idli, sheera etc. Every havyaka member were greeted at entrance and ladies were greeted with Arishina kumkuma, flowers and small purse as a token of gesture for attending the maduve. The stage program started at 10.00AM with the welcome prayer by group of ladies followed by lighting the lamp by senior members present in the hall.

Varieties of cultural and entertainment programs were conducted in which participants had opportunity to showcase their talent in classical music, bhajan and film song etc. As done every year this year too, on demand the quiz competition was conducted and it was well participated by contestants with great winning spirit and enjoyed by entire audience. Parallelly, competitions were conducted for vargai and bittakki batlu decorations in line with maduve theme in which many ladies participated and were able to display their artistic talent which was highly appreciated.

The highlight of the entertainment was the skit performed by members from Thane committee who have recreated maduve scene and taken the audience through all the maduve steps with high level performance by each individuals mixed with lot of funny moments. Ladies members from Kandivali presented a very energetic and entertaining Vyangyakshari competition.

In line with the maduve theme special lunch was served by Praveen Rao and his team with variety of delicacies including finger licking sweets with Kesaribath, Jalebi etc. Apart from buffet, food was served on banana leaves on table which was highly appreciated by senior members as it was reminded old golden days where food used to be served only banana leaves in the maduve function. Keeping with the maduve tradition laddu packets were distributed to all the members present in the hall. Immediately after the lunch, another entertaining skit added to the maduve theme was performed by Dombivali ladies.

The highlight of the event was Felicitation of Golden Jubilee couples with flowers, exchanging shawls and handed over the mementos as token of love from the members. In all 7 couples were present and all of them were welcomed on the stage with standing ovation by all the committee members and audience expressing their respect to senior couples. All couples were very happy, became emotional and shared their feelings, jovial experience with the audience.

Dr. Aparna Hegde, Urogyneclogist and Chairperson and Managing Trustee at ARMMAN was felicitated for her extraordinary achievements in the field of medical, health and social service.

Post tea break our own Havyaka standup comedian Shri Vinayak Balesara entertained the audience with variety of jokes and mimicries followed by very entertaining and scary magic show by havyaka couple from Bangalore Shri Narayana Bhat and Smt Manjula Narayan. Another great initiative of recognizing meritorious students on this occasion was well appreciated where in 20 Havyaka bright students passed from 10th to degree were honoured with merit trophy and small mementos as token of appreciation.

Stage program ended with thanking and recognizing all the sponsors for their generous contribution. Also appreciating all the ladies team members for leading the entire program from planning to execution level with the perfection. The grand day ended with preeti bhojan. Overall it was very memorable day and enjoyed by each and every Havyaka member present in the function.

## ಅಧಿಕ ಶ್ರಾವಣ : ಡೊಂಬಿವಲಿಯಲ್ಲಿ ಭಜನ ಕಾರ್ಯಕ್ರಮ

ಸ್ಥಳೀಯ ಪ್ರತಿಷ್ಠಿತ ಭಜನ ಮಂಡಲಗಳಲ್ಲೊಂದಾದ ಹವ್ಯಕ ಭಜನ ಮಂಡಳಿ ವತಿಯಿಂದ ಅಧಿಕ ಶ್ರಾವಣ ಮಾಸದ ಪ್ರಯುಕ್ತ ಭಜನ ಕಾರ್ಯಕ್ರಮವು ಜು. 23 ರಂದು ಡೊಂಬಿವಲಿ ಪೂರ್ವದ ಫಡ್ಕೆರೋಡ್‌ನ ಶ್ರೀ ಗಣೇಶ ಮಂದಿರದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ನಾರಾಯಣ ಹೆಗಡೆ, ಗಣಪತಿ ಹೆಗಡೆ, ಪಾರ್ವತಿ ಹೆಗಡೆ, ಸುಮಿತ್ರಾ ಭಟ್, ಗಂಗಾ ಭಟ್, ಲಲಿತಾ ಮಾರ್ಕಂಡೆ, ಸರೋಜಾ ಹೆಗಡೆ, ಕಮಲಾ ಬಗ್ಗೋಣ, ಇಂದುಮತಿ ವೀರ್ಕರ್, ಮಂಜುಳಾ ಭಟ್, ಹೊನ್ನಿ ಭಟ್, ಹೇಮಾವತಿ ಹೆಗಡೆ, ಗೌರಿ ಭಟ್ ಹಾಗೂ ಸಹೃದಾ ಭಟ್ ಭಜನೆಗಳನ್ನು ಪ್ರಸ್ತುತಪಡಿಸಿದರು.

ಹಿಮ್ಮೇಳದಲ್ಲಿ ಕೊಳಲು ವಾದನದಲ್ಲಿ ಭಾಸ್ಕರ್ ಭಟ್ ಹಾಗೂ ತಬಲಾದಲ್ಲಿ ಅಚ್ಯುತ್ ಅಪ್ಪೆ ಸಹಕರಿಸಿದರು. ಭಜನ ಕಾರ್ಯಕ್ರಮ ಆಯೋಜಿಸುವ ಮೂಲಕ ಪರಮಾತ್ಮನ ಸೇವೆಗೆ ಅವಕಾಶ ನೀಡಿದ ಗಣೇಶ ಮಂದಿರದ ಆಡಳಿತ ಮಂಡಳಿಗೆ ಹವ್ಯಕ ಭಜನ ಮಂಡಳಿ ವತಿಯಿಂದ ಕೃತಜ್ಞತೆ ಸಲ್ಲಿಸಲಾಯಿತು.

# Common Herbs for Home Remedies

✍ Dr. Narayan G. Hegde

**Turmeric : *Curcuma longa***



**Habitat :** Turmeric, is a perennial, erect and leafy succulent plant with very large aromatic leaves, grown in tropical and subtropical regions. It grows well in sandy soils under irrigation. Propagation is done through rhizomes. Crops takes 7-8 months for harvesting.

**Uses :** Turmeric has 4000 years long history of food and medicinal use. The rhizome contains over 100 components having medicinal value. The main components are turmerone and colouring agents called curcuminoid, which are also natural antioxidants.

- It is used for treating rheumatoid arthritis, chronic anterior uveitis, conjunctivitis, skin cancer, small pox, chicken pox, wound healing, urinary tract infections and liver ailments.
- It cures digestive disorders.



- It reduces flatus, jaundice, menstrual difficulties, colic, abdominal pain, loss of appetite, and liver and gallbladder complaints.
- It has anti-inflammatory, antimicrobial and carminative properties, useful for treatment of digestive organs.
- Consumption of fresh turmeric roots are helpful for treating arthritis and dyspepsia.
- Turmeric is used as an antiseptic for cuts, burns, and bruises, and cleanse wounds.
- In Ayurveda, turmeric is used to purify blood and treatment for various respiratory problems, liver disorders, anorexia, gastrointestinal problems, rheumatism, diabetic wounds, runny nose, cough, and sinusitis.
- Turmeric can help in balancing blood sugar, cholesterol optimisation, treating asthma, eczema, acute allergies, acne and psoriasis.
- Turmeric is anti-inflammatory to mucous membrane which coat the throat, lungs, stomach and intestine

## ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನದ ವಿಚಾರ ಸಂಕಿರಣ : ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಅನುಭವ ಸಂಪನ್ನ ಪರಿವಾರ ಹಾಗೂ ಪರಿಸರ ಅವಶ್ಯ : ಅಶೋಕ್ ಸುವರ್ಣ

ಯಾವಾಗ ಗಂಡ-ಹೆಂಡತಿ, ಮಕ್ಕಳೇ ಪರಿವಾರ ಎಂಬ ಸಂಸ್ಕೃತಿ ಹುಟ್ಟಿತೋ ಅಲ್ಲಿಂದ ಮದುವೆಯಲ್ಲಿ ಸ್ವಾರ್ಥ ಪ್ರಾರಂಭವಾಗಿ ಪರಿವಾರದ ಘನತೆ ಹಾಗೂ ಸಂಸ್ಕಾರ ಮಾಯವಾಯಿತು. ತಂದೆ-ತಾಯಿ; ಅಕ್ಕ-ತಂಗಿ; ಅಣ್ಣ-ತಮ್ಮ; ಸೋದರ ಮಾವ-ಅತ್ತೆ ಹೀಗೆ ಇವರೊಡನಿದ್ದ ಅನ್ಯೋನ್ಯತೆ ಮಾಯವಾಗಿ ಪರಿವಾರ ಎಂಬ ಮೂಲ ಸಂಸ್ಕಾರಯುತ ಪದ್ಧತಿ ಸವಕಳಿಯಾಯಿತು. ಇಂದಿನ ಶಿಕ್ಷಣ ಪದ್ಧತಿಯಲ್ಲಿ ಸಂಪಾದನೆಗಾಗಿ ಬೋಧನೆ ವಿನಹ ವಿಶಾಲ ತಿಳುವಳಿಕೆಗೆ ಆಸ್ಪದ ಇಲ್ಲ. ಎಲ್ಲಿ ದೂರದೃಷ್ಟಿ, ತ್ಯಾಗ, ಸಮರ್ಪಣಾ ಮನೋಭಾವನೆ ಇರುತ್ತದೆಯೋ ಅಲ್ಲಿ ಪರಿವಾರದ ಬೇರುಗಳು ಬಲವಾಗಿರುತ್ತದೆ. ಸಂಸಾರದ ದೀರ್ಘ ಬಾಳಿಕೆಗೆ ಬುನಾದಿ ಈ ಅನುಭವ ಸಂಪನ್ನ ಪರಿವಾರದಿಂದ ಸಾಧ್ಯ ಹಾಗೂ ಅದರ ಅವಶ್ಯವಿದೆ. ಎಂದು ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನವು ದಿನಾಂಕ 02.07.2023 ರವಿವಾರ ಕನ್ನಡ ವೆಲ್ಫೇರ್ ಸೊಸಾಯಿಟಿ ಸಭಾಗೃಹ ಘಾಟ್ಕೋಪರ್ ಇಲ್ಲಿ ಹಮ್ಮಿಕೊಂಡ 'ಮದುವೆ, ಪರಿವಾರ ಹಾಗೂ ಸಂಸ್ಕಾರ' ಎಂಬ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ ಅಶೋಕ ಸುವರ್ಣ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಅಭ್ಯಾಗತರಾಗಿ ಆಗಮಿಸಿದ ಕರ್ನಾಟಕ ಮಹಾಮಂಡಲ ಮೀರಾ- ಭಾಯಂದರ್ ಇದರ ಸಂಸ್ಥಾಪಕ ಅಧ್ಯಕ್ಷರು, ಮೀರಾ-ಭಾಯಂದರ್ ಪರಿಸರದ ಹಿರಿಯ ಸಾಮಾಜಿಕ ಕಾರ್ಯಕರ್ತ ಚಂದ್ರಶೇಖರ ಶೆಟ್ಟಿ ಅವರು ಮಾತನಾಡಿ ಕಾಡಿನಲ್ಲಿ ಬೆಳೆದ ಮಾವು ಸಮುದ್ರದ ಉಪ್ಪಿನ ಮಿಲನದಂತೆ ಅನ್ಯೋನ್ಯ ವಾಗಿರುವಂತದ್ದೇ 'ಮದುವೆ ಹಾಗೂ ಪರಿವಾರ' ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ವಿಶೇಷ ಅಭ್ಯಾಗತರಾಗಿ ಉಡುಪಿಯಿಂದ ಆಗಮಿಸಿದ್ದ ಸಂಶೋಧನ ಬರಹಗಾರ್ತಿ ಶ್ರೀಮತಿ ಶರೋನಾ ಶೆಟ್ಟಿ ಅವರು ತಮ್ಮ ವಿಚಾರ ಮಂಡಿಸುತ್ತ, 'ಮದುವೆ, ಪರಿವಾರ ಹಾಗೂ ಸಂಸ್ಕಾರ' ಇದು ಒಂದೇ ದಾರದಲ್ಲಿ ಪೋಣಿಸಿದ ಮಣಿಗಳಂತೆ. ಪರಿವಾರ ಇಲ್ಲದ ಮದುವೆ ದುಷ್ಯಂತ-ಶಕುಂತಲೆಯರ ಮದುವೆಯಂತೆ ಕಷ್ಟಕ್ಕೆ ಸಿಲುಕಬಹುದು. ಮದುವೆ ವಿಷಯದಲ್ಲಿ ಶ್ರೀರಾಮನ ನಡೆ ನಮಗೆಲ್ಲ ಆದರ್ಶ ಎಂಬ ಅಭಿಮತ ವ್ಯಕ್ತಪಡಿಸಿದರು. ಇನ್ನೋರ್ವ ಅಭ್ಯಾಗತರಾದ ಕವಿ, ಲೇಖಕಿ ಶ್ರೀಮತಿ ಶಾರದಾ ಅಂಚನ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತ ಕರಾವಳಿ ಹಾಗೂ ಕರ್ನಾಟಕದಲ್ಲಿನ ಮದುವೆ ಸಂಪ್ರದಾಯ, ಸಂಭ್ರಮದ ವಿಶೇಷತೆ ಹಾಗೂ ಅವುಗಳ ಮಹತ್ವ ತಿಳಿಸಿದರು.

ಅಭ್ಯಾಗತರಾದ ಕವಿ, ಲೇಖಕಿ ಶಾಂತಾ ಶಾಸ್ತ್ರಿ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತ 'ಮದುವೆ, ಪರಿವಾರ ಹಾಗೂ ಸಂಸ್ಕಾರ' ಶಬ್ದಗಳು ಪ್ರಪಂಚದ ನಿರಂತರತೆಯ ಅಸ್ತಿತ್ವವನ್ನು ಹೇಳುವ ಸಂಕೇತಗಳು. ಮದುವೆ ಶಬ್ದದಲ್ಲಿ ಎರಡು ಜೀವಾತ್ಮಗಳು ಅಡಕವಾಗಿವೆ. ಮದುವೆ

*PAGE DONATED BY :* ***SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

ಎಂಬುದು ಕೇವಲ ಒಂದು ಗಂಡು-ಹೆಣ್ಣಿನ 'ಬಂಧನ' ಮಾತ್ರ ಅಲ್ಲ ಅದು ಎರಡು ಕುಟುಂಬಗಳನ್ನು ಬೆಸೆಯುತ್ತವೆ. ಕೆಲವು ಸಲ ಶತ್ರುತ್ವ ಅಳಿಸಿ ಮಿತ್ರತ್ವ ಬೆಳೆಸುವ ಶಕ್ತಿ ಮದುವೆಗೆ ಇದೆ. ವಿವಾಹ ನಮ್ಮ ಸಾಮಾಜಿಕ ವ್ಯವಸ್ಥೆಯ ಭದ್ರ ಬುನಾದಿಯಲ್ಲೊಂದು ಎಂದು ತಮ್ಮ ಅಭಿಪ್ರಾಯ ತಿಳಿಸಿದರು. ಗುರು ಪೂರ್ಣಿಮೆಯ ಪರ್ವಕಾಲದ ಸುಸಂದರ್ಭದಲ್ಲಿ ಹಿರಿಯ ವಿದ್ವಾಂಸೆಯಾದ ಡಾ. ಶೈಲಜಾ ಹೆಗಡೆ ಅವರು ವೇದವ್ಯಾಸರ ಕುರಿತು ತಿಳಿಸಿದರಲ್ಲದೆ ಗುರುಪೂರ್ಣಿಮೆಯ ಮಹತ್ವವನ್ನು ತಿಳಿಸುತ್ತ ಗುರಿ ತಲುಪಬೇಕಾದರೆ ಗುರು ಬೇಕು. ಗುರಿ ತಲುಪಿದ ಮೇಲೆಯೂ ಗುರುವನ್ನು ಮರೆಯದೆ ಗುರುವನ್ನು ಸ್ಮರಿಸುವುದು ನಮ್ಮ ಕರ್ತವ್ಯ. ಆ ನಿಟ್ಟಿನಲ್ಲಿ ವೇದವನ್ನು ವಿಂಗಡಿಸಿ ಅದನ್ನು ಶ್ರೀ ಸಾಮಾನ್ಯರಿಗೆ ತಲುಪಿಸುವಲ್ಲಿ ಶ್ರಮಿಸಿದ ವೇದವ್ಯಾಸರ ಜಯಂತಿ ಹಲವು ವಿಶೇಷತೆಯಿಂದ ಕೂಡಿದೆ ಎಂದು ವಿವರಿಸಿದರು. ಕನ್ನಡ ವೆಲ್ಫೇರ್ ಸೊಸೈಟಿಯ ವೀಣಾ ಶೆಟ್ಟಿ ಅವರು ಪ್ರಾರ್ಥನೆಗೈದರು. ಅಭ್ಯಾಗತರು ದೀಪಪ್ರಜ್ವಲಿಸುವುದರೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಶ್ರೀಮತಿ ಲತಾ ಸಂತೋಷ್ ಮುದ್ದುಮನೆ ಅಭ್ಯಾಗತರನ್ನು ಸ್ವಾಗತಿಸಿದರು. ಪ್ರತಿಷ್ಠಾನದ ಕಾರ್ಯದರ್ಶಿ ವಿಶ್ವನಾಥ ದೊಡ್ಮನೆ ಪ್ರಾಸ್ತಾವಿಕವಾಗಿ ಮಾತನಾಡಿ ಇಂತಹ ಕಾರ್ಯಕ್ರಮ ಹಮ್ಮಿಕೊಳ್ಳುವ ಉದ್ದೇಶ ಹಾಗೂ ಪ್ರತಿಷ್ಠಾನದ ಕುರಿತು ವಿವರಿಸಿದರು.

## ಅಮಿತಾ ಭಾಗವತ್ ಅವರ 'ನೀಲಿ ನಕ್ಷೆ' ಕಾದಂಬರಿ ಸೇರಿ ನಾಲ್ಕು ಕೃತಿಗಳ ಲೋಕಾರ್ಪಣೆ

"ಸಾಹಿತ್ಯ ಎನ್ನುವುದು ಬೇರೆ ಬೇರೆ ಕಣ್ಣುಗಳಿಂದ ಲೋಕವನ್ನು ಗ್ರಹಿಸುವ ಮಾಧ್ಯಮ. ಪ್ರತಿ ಪುಸ್ತಕವೂ ಸಹಬಾಳ್ವೆಗೆ, ಮಾನಸಿಕ ಬೆಳವಣಿಗೆಗೆ ಕಿಡಕಿಯನ್ನು ತೆರೆಯುತ್ತ ಮನುಜ ಲೋಕವನ್ನು ವಿಕಾಸದ ಮಾರ್ಗದಲ್ಲಿ ಕೊಂಡೊಯ್ಯುತ್ತದೆ. ಸಮಾಜದಲ್ಲಿ ಬದುಕುವ ನಾವು ಎಷ್ಟೋ ಜನರಿಗೆ ಋಣಿಗಳಾಗಿದ್ದೇವೆ. ಬರವಣಿಗೆಯ ಮೂಲಕ ನಾವು ಸ್ವಾರ್ಥದ ಗೋಡೆಯನ್ನು ದಾಟಿ ವಿಶ್ವ ಚೈತನ್ಯದೊಂದಿಗೆ ಒಂದಾಗಲು ಸಾಧ್ಯ" ಎಂದು ಖ್ಯಾತ ಸಾಹಿತಿ ಜಯಂತ ಕಾಯ್ಕಿಣಿಯವರು ಅಭಿಪ್ರಾಯ ಪಟ್ಟರು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಡ್ ಕಲ್ಚರ್ ಬೆಂಗಳೂರಿನಲ್ಲಿ, ಅಂಕಿತ ಪುಸ್ತಕ ಪ್ರಕಾಶನದಿಂದ, ಆಗಸ್ಟ್ 20 ಭಾನುವಾರದಂದು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅಮಿತಾ ಭಾಗವತ್ ಬರೆದ 'ನೀಲಿ ನಕ್ಷೆ' ಕಾದಂಬರಿ, ನಾ ಮೊಗಸಾಲೆಯವರ 'ನೀರು' ಕಾದಂಬರಿ, ಎನ್.ಸಿ. ಮಹೇಶ್ ರಚಿಸಿದ 'ಸಾಕು ತಂದೆ ರೂಮಿ' ನಾಟಕ ಹಾಗೂ ಎಚ್. ಡುಂಡಿರಾಜ ವಿರಚಿತ 'ಹನಿಟ್ರ್ಯಾಪ್' ಹನಿಗವನಗಳನ್ನು ಅನಾವರಣಗೊಳಿಸಿ ಅವರು ಮಾತನಾಡಿದರು.

"ಇಡಿ-ಬಿಡಿಗಳ ಸಹಯೋಗ ಕಾದಂಬರಿಗೆ ಮುಖ್ಯ, ಅದರೊಂದಿಗೆ ಕಾದಂಬರಿಗಾರನಿಗೆ ಸಹನೆಯೂ ಅಗತ್ಯ. 'ನೀಲಿ ನಕ್ಷೆ' ಕಾದಂಬರಿಯಲ್ಲಿ ಲೇಖಕಿಯು ಸಾಧಿಸಿರುವ ಹದ ಅಪರೂಪದ್ದಾಗಿದೆ. ಸಮಾಜ ಹೇರುವ ಅಯಾಚಿತ ಅಚ್ಚುಗ್ಗಳಿಂದ ಮುಕ್ತಗೊಳ್ಳುವುದು ನಿಜವಾದ ಗುರುತೇ? ಅಥವಾ ಹೊಸದೊಂದು ಗುರುತಿಗಾಗಿ ಹಂಬಲಿಸುವುದೇ? ಅಥವಾ ಯಾವುದೇ ಗುರುತಿನ ಹಂಗಿಲ್ಲದೆ ಪ್ರವಹಿಸುವುದೇ? ಈ ಮೂರು ಎಳೆಗಳನ್ನು ನಲ್ಮೆಯಿಂದ ಹಿಡಿದು ಕಟ್ಟಿದ ಜಡೆಯಂತಹ ಈ ಕಾದಂಬರಿಯ ಹೆಣಿಗೆ ಘನವಾದದ್ದು. ಈ ಕಾದಂಬರಿಯ ಶೃತಿ. ಓಘ, ಪಕ್ವತೆ ಅಚ್ಚರಿ ಹುಟ್ಟಿಸುವಂತಿದೆ. ಅಷ್ಟೇ ಅಲ್ಲ ಇಸ್ಪೀಟು ಎಲೆಗಳನ್ನು ಅಲ್ಲಲ್ಲೇ ಕಲಸಿ, ಹಂಚಿ ಆಟ ಮುಂದುವರಿಸುವಂತೆ ಕಾದಂಬರಿಯ ಪಾತ್ರಗಳು, ಸನ್ನಿವೇಶಗಳು ಒಂದರೊಳಗೊಂದು ಕಲೆಯುತ್ತ. ಬೇರ್ಪಡುತ್ತ ಮುಂದೆ ಚಲಿಸುವ ರೀತಿ ಚುರುಕಾಗಿದ್ದು, ಮುಂಬಯಿತನದ ಪ್ರತಿಫಲನವೂ ಆಗಿದೆ" ಎಂದು ಕಾಯ್ಕಿಣಿಯುವರು ಅಮಿತಾ ಭಾಗವತ್ ಅವರನ್ನು ಅಭಿನಂದಿಸಿದರು.

ಕಾದಂಬರಿಯನ್ನು ಪರಿಚಯಿಸಿದ, ಅತಿಥಿಗಳಾದ ಕರ್ಕಿ ಕೃಷ್ಣ ಮೂರ್ತಿಯವರು "ಕಾದಂಬರಿಯನ್ನು ಬರೆಯುವುದು ಸುಲಭವಲ್ಲ. ಅದು ಸತತ ಪರಿಶ್ರಮದೊಂದಿಗೆ ಧ್ಯಾನಸ್ಥ ಸ್ಥಿತಿಯನ್ನೂ ಕೂಡ ಬಯಸುತ್ತದೆ. ಕಾದಂಬರಿಯಲ್ಲಿರಬೇಕಾದಂತಹ ಪಕ್ವತೆಯನ್ನು ಮೊದಲನೇ ಕಾದಂಬರಿಯಲ್ಲೇ ಪ್ರಕಟಗೊಳಿಸಿದ ಅಮಿತಾ ಭಾಗವತ್‌ರ ಕಥನ ಶೈಲಿಯಲ್ಲಿ ಹೂವು ಸಹಜವಾಗಿ ಅರಳಿದ ಪ್ರಕ್ರಿಯೆಯಿದೆ. ಜೀವನಕ್ಕೆ ಹತ್ತಿರವಾಗಿರುವ ಸಣ್ಣಪುಟ್ಟ ಸಂಗತಿಗಳಿಂದ ಸಮೃದ್ಧವಾಗಿರುವ ಈ ಕೃತಿಯು ಅನುಭವಜನ್ಯ ವಾಗಿದೆ" ಎಂದು ಅಭಿಪ್ರಾಯ ಪಟ್ಟರು. ನಾ ಮೊಗಸಾಲೆಯವರ 'ನೀರು' ಕಾದಂಬರಿಯ ಬಗ್ಗೆ ಮಾತನಾಡುತ್ತಾ, ದಾಯಾದಿಗಳ ಕಲಹ ಪುರಾಣ ಕಾಲದಿಂದಲೂ ಕಂಡುಬರುವ ವಿಷಯವಾಗಿದ್ದರೂ ಅದರ ಸ್ವರೂಪ ಕಾಲಕ್ಕೆ ತಕ್ಕಂತೆ ಬದಲಾಗುತ್ತಿರುವುದನ್ನು ನೋಡಬಹುದು. 'ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ' ಎನ್ನುವ ಅಲ್ಲಮಪ್ರಭುರವರ ವಚನವನ್ನು ನುಡಿಗಟ್ಟಾಗಿ ಬಳಸಿಕೊಂಡಿರುವ ಅವರ ಕಾದಂಬರಿಯು ಗ್ರಾಮ್ಯ ಜೀವನದ ನೈಜತೆಯನ್ನು ಬಿಂಬಿಸುತ್ತದೆ ಎಂದರು.

ಇನ್ನೋರ್ವ ಅತಿಥಿಗಳಾದ ಶ್ರೀ ಜೋಗಿಯವರು ಎನ್.ಸಿ. ಮಹೇಶರವರು ರಚಿಸಿದ 'ಸಾಕು ತಂದೆ ರೂಮಿ'ಯ ಬಗ್ಗೆ ಮಾತನಾಡುತ್ತ, ಜೀವನದ ಸಂಘರ್ಷವನ್ನು ನಾಟಕವು ತೆರೆದಿಡುವ ಪ್ರಕ್ರಿಯೆಗೆ ಸಾಹಿತ್ಯದ ಇನ್ನು ಯಾವ ಪ್ರಕಾರವೂ ಸರಿಸಾಟಿಯಾಗಲಾರದು. ಅವರ ನಾಟಕವು ನಾವರಿಯದ 'ರೂಮಿ'ಯ ಜೀವನದ ಮಗ್ಗಲುಗಳನ್ನು ತೆರೆದಿಡುತ್ತದೆ ಎಂದರು. ಎಚ್. ಡುಂಡಿರಾಜ್ ಅವರ ಹನಿಗವನಗಳು ತಮ್ಮ ನವಿರಾದ ಹಾಸ್ಯದಿಂದ ಮನವನ್ನು ಅರಳಿಸುತ್ತದೆ ಎನ್ನುತ್ತಾ ಅವರ ಹನಿಗವನಗಳನ್ನು ಪ್ರಸ್ತುತಪಡಿಸಿದರು.

ಎನ್.ಸಿ. ಮಹೇಶರವರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತ ರೂಮಿ ತಮ್ಮನ್ನು ಸೆಳೆದ ಬಗೆಯನ್ನು ವಿವರಿಸಿದರು. 'ನೀಲಿ ನಕ್ಷೆ' ಕಾದಂಬರಿಯ ಲೇಖಕಿ ಅಮಿತಾ ಭಾಗವತ್ ಅವರು ಮುಂಬಯಿಯಲ್ಲಿ ಜೀವನ್ಮುಖಿಯಾಗಿ ಜನಜೀವನವು ಪರಸ್ಪರ ಬೆಸೆದುಕೊಂಡಿದೆ ಎಂದು ಮುಂಬಯಿ ಬಗ್ಗೆ ಮಾತನಾಡಿ, ಕನ್ನಡದ ಮೇಲಿನ ಪ್ರೀತಿಯು ತನ್ನನ್ನು ಸಾಹಿತ್ಯದೆಡೆಗೆ ಸೆಳೆಯಿತು ಎಂದರು. "ಸ್ವಕೇಂದ್ರಿತ ಜೀವನದ ಪರಿಧಿಯಿಂದ ಹೊರಬಿದ್ದು, ವಿಸ್ತರ ನೆಲೆಯಲ್ಲಿ ಒಂದಾಗಲು ಕಾದಂಬರಿಯ ಬರವಣಿಗೆ ನೆರವಾಯಿತು. ನನ್ನ ಕಾದಂಬರಿಯ ಮುಖ್ಯ ಪಾತ್ರವಾದ 'ಸರಯೂ' ಇಷ್ಟು ದಿನ ನನ್ನ ಜೊತೆಗಿದ್ದಳು. ಇನ್ನು ಅವಳು ನಿಮ್ಮ ಮಡಿಲಲ್ಲಿ" ಎನ್ನುತ್ತಾ ಬರೆಯಲು ಸ್ಫೂರ್ತಿಯಾದ ಎಲ್ಲರನ್ನೂ ನೆನೆದರು. 'ಹನಿಟ್ರ್ಯಾಪ್' ಹನಿಗವನಗಳನ್ನು ರಚಿಸಿದ ಎಚ್. ಡುಂಡಿರಾಜ್ ಅವರು ತಮ್ಮ ಹನಿಗವನಗಳನ್ನು ವಾಚಿಸಿದರು. ಅಂಕಿತ ಪುಸ್ತಕದ ಪ್ರಕಾಶ್ ಕಂಬತ್ತಳ್ಳಿ ಕಾರ್ಯಕ್ರಮವನ್ನು ನಿರೂಪಿಸಿದರು. ತುಂಬಿದ ಸಭಾಂಗಣದಲ್ಲಿ ಪ್ರಾಣೇಶ್, ವಸುಧೇಂದ್ರ, ಟಿ.ಎನ್. ಸೀತಾರಾಮ್ ಮೊದಲಾದ ಅನೇಕ ಸಾಹಿತಿಗಳೂ, ಸಾಹಿತ್ಯಾಸಕ್ತರೂ ಪಾಲ್ಗೊಂಡಿದ್ದರು.

*PAGE DONATED BY : **SHRI A. K. BHAT, CHITRIGI & FAMILY***





Havyaka Geleyara Balaga Get-together at Mulund









Adhik Shravana : Bhajan by Dombivli Havyaka Bhajan Mandali



Mayuravarma Sanskritika Prathistana : Vichara Sankirana



Novel written by Amita Bhagwat released by Ankita Pustaka at Bangaluru

*'Havyaka Sandesha' September 2023*

***RNI NO. MAHBIL / 2000 / 746,***
***Postal Registration No. MCN/161/2021-2023***
***WPP License No. MR / Tech / WPP-130 / North / 2021-2023***
***'Licence to post without prepayment'***

***Posted at Mumbai Patrika Channel Stg. Office Mumbai - 400 001***
**Date of Publication : 1st of every month**
**REGISTERED NEWSPAPER**
**Date of Posting :**
**2nd, 3rd of every month**

***If undelivered, please return to :***
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

**To,**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**



## Achievement

**Kumari Bhoomi V. Hegde,** D/o. our Life Member Shri Vinay V. Hegde and Grand daughter of Shri. V. T. Hegde Janmane, Sirsi has scored 96.5 % in the recently concluded H.S.C. board examination. She plans to pursue her MBBS going forward.

☆ ☆ ☆



**Kumari Ishita,** D/o. Smt.Deepika and Shri Srikant Somayaji, Grand Daughter of Shri G. V. Bhagwat secured 94% in 12th grade. She got 98% in Physical Education and is subject topper from her school.

***We Congratulate and wish them a bright future.***

Contact
**CM JOSHI,** Director
Mobile : 8879590011
**OWNER THE RISING STARS EVENT MANAGEMENT**

